ಬೆಲೆ ರೂ.2.50
D.O.P - 15th of every month at Udupi Sorting Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಜನವರಿ 2016

॥ ಧಿಯೋ ಯೋನಃ ಪ್ರಚೋದಯಾತ್ ॥

**Smt. Nagaveni Ullas**
Proprietor
Mobile : 9741626190
E-mail : rao.ullas@yahoo.co.in

**RAMDEV ENTERPRISES**
"Ramdev", Opp. Balaganapathi Temple, Padubidri-574111, Udupi Dist.


Authorised Distributor For :
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-16 ಸಂಚಿಕೆ-1 ಪುಟಗಳು-10 Registered Under No.UDP/1260/2015-2017 Licenced to Post without Prepayment WPP No. SK/WPP/UDP/81/15-17

## ಶ್ರೀ ಕ್ಷೇತ್ರ ಉದಯಾದ್ರಿಯಲ್ಲಿ ಸಂಭ್ರಮದ ಎಳ್ಳಮಾವಾಸ್ಯೆ ಜಾತ್ರೆ

ಪಡುಬಿದ್ರಿ ಪೇಟೆಯಿಂದ ಪೂರ್ವಾಭಿಮುಖವಾಗಿ ಸಾಗುವ ರಸ್ತೆಯಲ್ಲಿ ಸುಮಾರು ಒಂದು ಫರ್ಲಾಂಗ್ ದೂರದಲ್ಲಿರುವ ಕ್ಷೇತ್ರ ಉದಯಾದ್ರಿ. ಬಾಲಗಣಪತಿ ಹಾಗೂ ಪ್ರಸನ್ನ ಪಾರ್ವತಿ ಇಬ್ಬರು ಈ ಕ್ಷೇತ್ರದ ಪ್ರಧಾನ ದೇವರುಗಳು. ನೂರೈವತ್ತು ವರ್ಷಗಳ ಹಿಂದೆ ಪಡುಬಿದ್ರಿಯ ಪುಣ್ಯ ಪುರುಷ, ಅವಧೂತ, ಯೋಗಿ ಶ್ರೀ ನಾರಾಯಣ ರಾಯರು ಗೋಕರ್ಣ ಕ್ಷೇತ್ರದಲ್ಲಿ ಪುಣ್ಯಸ್ನಾನ ಮಾಡುವಾಗ ಗಣಪತಿಯ ವಿಗ್ರಹವೊಂದು ಕಾಣಿಸಿಕೊಂಡು ಸ್ವಪ್ನ ಪ್ರೇರಣೆಯಂತೆ ಚತುರ್ಭುಜ, ಫಲಹಸ್ತನಾದ ಬಾಲಗಣಪತಿಯ ಸುಂದರ ವಿಗ್ರಹವನ್ನು ಉದಯಾದ್ರಿಯಲ್ಲಿ ಪ್ರತಿಷ್ಠಾಪಿಸಿ, ಉತ್ಸವಾದಿಗಳನ್ನು ನಡೆಸಿಕೊಂಡು ಬರುತ್ತಿದ್ದರು. ಈ ಕ್ಷೇತ್ರವು ಪರಿಸರದಲ್ಲಿ ಎಳ್ಳಮಾವಾಸ್ಯೆ ಗಣಪತಿ ಎಂದೇ ಪ್ರಖ್ಯಾತವಾಗಿದೆ. ಇತ್ತೀಚೆಗಷ್ಟೇ ಸಮಗ್ರವಾಗಿ ಜೀರ್ಣೋದ್ಧಾರಗೊಂಡು ಪ್ರಶಾಂತವಾದ ವಾತಾವರಣದಲ್ಲಿ ಭಕ್ತರ ಮನೋಭೀಷ್ಟಗಳನ್ನು ಈಡೇರಿಸುತ್ತಾ ಕರುಣಿಸುತ್ತಾ ಕಂಗೊಳಿಸುತ್ತಿರುವ ಪಾವನ ಕ್ಷೇತ್ರವಿದು. ಕಳೆದ ವರ್ಷ ಡಿಸೆಂಬರಿನಲ್ಲಿ ನಮ್ಮೆಲ್ಲಾ ಸಮಾಜ ಬಾಂಧವರು ಸೇರಿ ಋಖ್ ಸಂಹಿತಾಯಾಗವನ್ನು ನೆರವೇರಿಸಿದ್ದು ಇಲ್ಲಿಯೇ.







ಪ್ರತೀ ವರ್ಷ ಇಲ್ಲಿ ಧನುರ್ಮಾಸದ ದಿನ ೨೪ ಸಲುವ ಮಾರ್ಗಶಿರದಂದು ವಿಜೃಂಭಣೆಯಿಂದ ಜಾತ್ರೆ ನಡೆಯುತ್ತದೆ. ಎಳ್ಳಮಾವಾಸ್ಯೆ ಜಾತ್ರೆಯೆಂದೇ ಇದು ಊರಲ್ಲಿ ಪ್ರಸಿದ್ಧ. ಈ ವರ್ಷವೂ ಬ್ರಹ್ಮಶ್ರೀ ವಾಗೀಶಶಾಸ್ತ್ರಿಗಳ ನೇತೃತ್ವದಲ್ಲಿ ವಿಜೃಂಭಣೆಯಿಂದ ಜಾತ್ರೆಯು ತಾ.09-01-2016 ರಂದು ನೆರವೇರಿತು. ಜಾತ್ರೆಯ ಪೂರ್ವಭಾವಿಯಾಗಿ ಕಾರ್ಯಕ್ರಮಗಳು ತಾ.25-12-2015 ರಿಂದಲೇ ಆರಂಭವಾದವು. ಪ್ರತಿ ದಿನ ಸಂಜೆ ಭಕ್ತಾಭಿಮಾನಿಗಳಿಂದ 8-1-2016ರ ತನಕ ರಂಗಪೂಜೆ ನಡೆಯಿತು.

ತಾ. 09-01-2016ರಂದು ಮುಂಜಾನೆ ದೇವತಾ ಪ್ರಾರ್ಥನೆಯ ಬಳಿಕ ಬೆಳಿಗ್ಗೆ ಎಂಟು ಗಂಟೆಗೆ ಶ್ರೀ ಗಣಪತಿ ಅಥರ್ವಶೀರ್ಷ ಸಹಸ್ರ ಮೋದಕ ಯಾಗ ನಡೆಯಿತು. ನೂರಾರು ಭಕ್ತರು ಈ ಯಾಗದಲ್ಲಿ ಪಾಲ್ಗೊಂಡು ಹವಿಸ್ಸನ್ನು ಸಮರ್ಪಿಸಿದರು. ಮಧ್ಯಾಹ್ನ ಅನ್ನಸಂತರ್ಪಣೆಯಲ್ಲಿ ಸಾವಿರಾರು ಜನ ಊರವರು ಹಾಗೂ ಸಮಾಜ ಬಾಂಧವರು ಭಾಗವಹಿಸಿದ್ದರು. ಸಂಜೆ ಪಡುಬಿದ್ರಿಯ ಸ್ಥಾನಿಕ ಬ್ರಾಹ್ಮಣ ಸಂಘದ ಮಹಿಳಾ ವೇದಿಕೆಯ ಸದಸ್ಯರಿಂದ ಭಜನಾ ಕಾರ್ಯಕ್ರಮವು ನೆರವೇರಿತು. ರಾತ್ರಿ ಏಳು ಗಂಟೆಯಿಂದ ಮಹಾರಂಗಪೂಜೆ, ಉತ್ಸವಬಲಿ, ಕಟ್ಟೆ ಪೂಜೆಯ ನಂತರ ಪ್ರಸಾದ ವಿತರಣೆ ಮಂತ್ರಾಕ್ಷತೆಯೊಂದಿಗೆ ಜಾತ್ರೆ ಸಂಪನ್ನಗೊಂಡಿತು.

ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳು ಕ್ಷೇತ್ರದ ತಂತ್ರಿಗಳಾಗಿ ಉತ್ಸವ ಕಾರ್ಯಕ್ರಮದ ನೇತೃತ್ವವನ್ನು ವಹಿಸಿದ್ದರು. ಪುರೋಹಿತರಾದ ಶ್ರೀ ಬ್ರಹ್ಮಶ್ರೀ ಕೃಷ್ಣರಾಜ ಭಟ್, ಬ್ರಹ್ಮಶ್ರೀ ನಾಗಭೂಷಣ ಶಾಸ್ತ್ರಿ, ಬ್ರಹ್ಮಶ್ರೀ ಅರವಿಂದ ಶರ್ಮ, ಬ್ರಹ್ಮಶ್ರೀ ಪ್ರತಾಪ್ ರಾವ್ ಕಾವಳಕಟ್ಟೆ, ಶ್ರೀ ಜಗದಾಭಿರಾಮ ಸ್ವಾಮಿ ಹಾಗೂ ಶ್ರೀ ನಯನಾಭಿರಾಮ ಸ್ವಾಮಿರವರು ಋತ್ವಿಜರಾಗಿ ಸಹಕರಿಸಿದರು.

ತನುಮನಧನ ಸಹಾಯವಿತ್ತು ಜಾತ್ರೆಯ ಯಶಸ್ಸಿಗೆ ಸಹಕರಿಸಿದ ಊರ ಪರವೂರ ಭಕ್ತರಿಗೆ ಹಾಗೂ ಸಮಾಜ ಬಾಂಧವರಿಗೆ ದೇವಳದ ಆಡಳಿತ ಮಂಡಳಿ, ಅರ್ಚಕ ವೃಂದ ಹಾಗೂ ಪಡುಬಿದ್ರೆಯ ಸ್ಥಾನಿಕ ಬ್ರಾಹ್ಮಣ ಸಭಾಗಳು ಕೃತಜ್ಞತೆಗಳನ್ನು ಅರ್ಪಿಸಿವೆ.

ವರದಿ : **ಶ್ರೀ ಸುದರ್ಶನ್ ಪ್ರಸಾದ್**

---

॥ ಶ್ರೀ ರಾಜರಾಜೇಶ್ವರೀ ಪ್ರಸನ್ನಾ ॥

## ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನ

**ಅಂಚೆ : ಕೋಡಿಂಬಾಡಿ - 574325, ಪುತ್ತೂರು ತಾಲೂಕು, ದ.ಕ.**

ಆತ್ಮೀಯ ಭಗವದ್ಭಕ್ತರೇ, ಮಠದಬೆಟ್ಟು ತಾ.25-10-2015

**ಶ್ರೀಮತ್ ಪರಮಹಂಸ ಪರಿವ್ರಾಜಕಾಚಾರ್ಯವರ್ಯೇತ್ಯಾದಿ ಅನೇಕ ಬಿರುದಾಂಕಿತ**
**ಶ್ರೀ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ ಜಗದ್ಗುರು ಶ್ರೀ ಶ್ರೀ ಭಾರತೀರ್ಥ ಮಹಾಸ್ವಾಮಿಗಳವರ**
**ಮತ್ತು ತತ್ಕರ ಕಮಲಸಂಜಾತರಾದ ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳವರ ಪರಮಾಶೀರ್ವಾದಗಳಿಂದ**
**ಹಾಗೂ ಘನಪುರಿ ಸಂಸ್ಥಾನ ಶ್ರೀ ಕೋದಂಡಾಶ್ರಮ ಮಠ, ಹೆಬ್ಬೂರು ಇದರ ಮಠಾಧೀಶರಾದ**
**ಶ್ರೀ ಶ್ರೀ ನಾರಾಯಣಾಶ್ರಮ ಸ್ವಾಮಿ ಕರಕಮಲ ಸಂಜಾತ ಶ್ರೀ ಶ್ರೀ ಮಾಧವಶ್ರಮ ಸ್ವಾಮಿಗಳ ದಿವ್ಯ ಉಪಸ್ಥಿತಿಯಲ್ಲಿ**

ಸ್ವಸ್ತಿ । ಶ್ರೀ ಶಾಲಿವಾಹನ ಶಕ ವರ್ಷ ೧೯೩೭ನೇ ಮನ್ಮಥನಾಮ ಸಂವತ್ಸರದ ಪೌಷ ಮಾಸ ಅಷ್ಟಮಿಯಿಂದ ಪೂರ್ಣಿಮೆಯ ಪರ್ಯಂತ ದಿನಾಂಕ 17-01-2016ನೇ ಆದಿತ್ಯವಾರದಿಂದ 24-01-2016ನೇ ಆದಿತ್ಯವಾರದವರೆಗೆ ಶ್ರೀ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ವೇದಮೂರ್ತಿ ಪಾವಂಜೆ ವಾಗೀಶ ಶಾಸ್ತ್ರೀಯವರ ನೇತೃತ್ವದಲ್ಲಿ

**ಶ್ರೀ ರಾಜರಾಜೇಶ್ವರೀ ಅಮ್ಮನವರ ಪುನಃಪ್ರತಿಷ್ಠಾ- ಬ್ರಹ್ಮಕುಂಭಾಭಿಷೇಕ ಮಹೋತ್ಸವಗಳು**

ಸಂಪನ್ನಗೊಳ್ಳಲಿರುವುವು.

ಭಗವದ್ಭಕ್ತರಾದ ತಾವೆಲ್ಲರೂ ವೈದಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತನು-ಮನ-ಧನಗಳಿಂದ ಸಹಕರಿಸಿ ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತೇವೆ.

| | | |
|---|---|---|
| **ಅಧ್ಯಕ್ಷರು ಮತ್ತು ಸರ್ವ ಸದಸ್ಯರು** | **ಅಧ್ಯಕ್ಷರು ಮತ್ತು ಸರ್ವ ಸದಸ್ಯರು** | **ಅಧ್ಯಕ್ಷರು ಮತ್ತು ಸದಸ್ಯರು** |
| ಜೀರ್ಣೋದ್ಧಾರ ಸಮಿತಿ | ಬ್ರಹ್ಮಕಲಶೋತ್ಸವ ಸಮಿತಿ | ಆಡಳಿತ ಸಮಿತಿ. |

**ಕಾರ್ಯಕ್ರಮಗಳು :**

| | |
|---|---|
| 17-01-2016ನೇ ಆದಿತ್ಯವಾರ | : ಸಂಜೆ ಶ್ರೀ ದೇವರ ಮೂಲಬಿಂಬ ಶುದ್ಧಿ |
| 19-01-2016ನೇ ಮಂಗಳವಾರ | : ಸಂಜೆ 5 ಗಂಟೆಗೆ ಶ್ರೀ ಕ್ಷೇತ್ರದ ತಂತ್ರಿಗಳಿಗೆ ಸ್ವಾಗತ, ವಾಸ್ತುಹೋಮ. |
| 20-01-2016ನೇ ಬುಧವಾರ | : ಬೆಳಿಗ್ಗೆ ಧಾರ್ಮಿಕ ಕಾರ್ಯಕ್ರಮ. ಸಂಜೆ : 6 ರಿಂದ 8 ಗಂಟೆಯ ವರೆಗೆ ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಜಿಯವರ ಉಪಸ್ಥಿತಿಯಲ್ಲಿ ಸಭಾ ಕಾರ್ಯಕ್ರಮ. |
| 21-01-2016ನೇ ಗುರುವಾರ | : ಬೆಳಿಗ್ಗೆ 8 ಗಂಟೆಯಿಂದ ಧಾರ್ಮಿಕ ಕಾರ್ಯಕ್ರಮ. ಸಂಜೆ 6 ಗಂಟೆಗೆ ಶ್ರೀ ಎ. ಶಿವರಾವ್‌ರವರ ಉಪಸ್ಥಿತಿಯಲ್ಲಿ ಸಭಾ ಕಾರ್ಯಕ್ರಮ. |
| 22-01-2016ನೇ ಶುಕ್ರವಾರ | : ಬೆಳಿಗ್ಗೆ 8 ಗಂಟೆಗೆ ಚಂಡಿಕಾಹವನ. ಸಂಜೆ 6 ಗಂಟೆಗೆ ಕೆ. ಪ್ರಭಾಕರ ರಾವ್ ಉಪಸ್ಥಿತಿಯಲ್ಲಿ ಸಭಾಕಾರ್ಯಕ್ರಮ |
| 23-01-2016 ನೇ ಶನಿವಾರ | : ಬೆಳಿಗ್ಗೆ ಧಾರ್ಮಿಕ ಕಾರ್ಯಕ್ರಮ, ಸಂಜೆ ಶ್ರೀ ಡಿ. ವಿರೇಂದ್ರ ಹೆಗ್ಗಡೆ ಹಾಗೂ ಶ್ರೀ ಡಿ. ವಿ. ಸದಾನಂದ ಗೌಡರ ಉಪಸ್ಥಿತಿಯಲ್ಲಿ ಸಭಾ ಕಾರ್ಯಕ್ರಮ. |
| 24-01-2016 ನೇ ಆದಿತ್ಯವಾರ | : ಬೆಳಿಗ್ಗೆ ಬ್ರಹ್ಮ ಕುಂಭಾಭಿಷೇಕ, ಧಾರ್ಮಿಕ ಪ್ರವಚನ, ಮಧ್ಯಾಹ್ನ ಅನ್ನಸಂತರ್ಪಣೆ ಸಂಜೆ ಶ್ರೀ ಬಿ. ರಮಾನಾಥ ರೈ ಅವರ ಉಪಸ್ಥಿತಿಯಲ್ಲಿ ಸಭಾ ಕಾರ್ಯಕ್ರಮ |

**ಪ್ರತಿದಿನ ಸಂಜೆ ಸಭಾ ಕಾರ್ಯಕ್ರಮದ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ಇರುತ್ತವೆ.**
**ಎಲ್ಲರಿಗೂ ಆದರದ ಸ್ವಾಗತ**

---

## ಯುವ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

**ಕುಂಜಿಬೆಟ್ಟು, ಉಡುಪಿ**

### ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ-2016

**ತಾ.24-01-2016ನೇ ರವಿವಾರ ಉಡುಪಿಯ ಎಮ್.ಜಿ.ಎಮ್ ಕಾಲೇಜು ಗ್ರೌಂಡ್‌ನಲ್ಲಿ ನಡೆಯಲಿದೆ.**

**ಆಸಕ್ತ ತಂಡಗಳು 20-01-2016ರೊಳಗೆ ಮೆನೇಜರ್ ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು (Ph : 0820-2520754), ಕರಂಬಳ್ಳಿ ವಸಂತ್ ರಾವ್ (M : 9632291183), ಉಂಡಾರು ಕೃಷ್ಣರಾಜ ರಾವ್ (M : 9164581333), ಕೆ. ಸುರೇಶ್ ರಾವ್, ಕುತ್ಪಾಡಿ (M : 9036443884) ಇವರಲ್ಲಿ ತಮ್ಮ ತಂಡದ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.**

**ವಿಶೇಷ ಸೂಚನೆ :**

1) ಪಂದ್ಯಾವಳಿಯು ಓವರ್ ಆರ್ಮ್, ಟೆನ್ನಿಸ್‌ಬಾಲ್, ನಿಗದಿತ ಓವರ್‌ಗಳಂತೆ ನಡೆಯುತ್ತದೆ.
2) ಪಂದ್ಯಾವಳಿಯು ನಮ್ಮ ಸಮಾಜ ಬಾಂಧವರಿಗೆ ಮಾತ್ರ ಸೀಮಿತವಾಗಿದೆ.
3) ತಂಡಗಳು ಪಂದ್ಯಾಟದ ದಿನ ಬೆಳಿಗ್ಗೆ 8-30ಕ್ಕೆ ಕ್ರೀಡಾಂಗಣದಲ್ಲಿ ಹಾಜರಿದ್ದು ಸಹಕರಿಸಬೇಕು.
4) ಅಲೆವೂರು ದಿ। ಭುಜಂಗ ರಾವ್ ಮತ್ತು ದಿ। ಶಾಂತಾ ದೇವಿ ಸ್ಮರಣಾರ್ಥ ಅವರ ಪುತ್ರ ಅಲೆವೂರು ಶ್ಯಾಮರಾವ್ ನೀಡುವ ನಗದು ಬಹುಮಾನಗಳನ್ನು ವಿಜೇತ ತಂಡಗಳಿಗೆ ವಿತರಿಸಲಾಗುವುದು.

**ಇದೇ ದಿನ 10ನೇ ತರಗತಿಯವರೆಗಿನ ಮಕ್ಕಳಿಗೆ ಹಾಗೂ ಹಿರಿಯ ನಾಗರಿಕರಿಗೂ ಕ್ರಿಕೆಟ್ ಪಂದ್ಯಾಟ**ಗಳು ನಡೆಯಲಿದೆ. ಆಸಕ್ತ ತಂಡಗಳು ಬೆಳಿಗ್ಗೆ 9-30ಕ್ಕೆ ಹಾಜರಿರಬೇಕಾಗಿ ಅಪೇಕ್ಷೆ. ಕ್ರಿಕೆಟ್ ಪಂದ್ಯಾಟಕ್ಕೆ ಪ್ರಾಯೋಜಕರಾಗಿ, ದಾನಿಗಳಾಗಿ ಹಾಗೂ ಬ್ಯಾನರ್ ಪ್ರದರ್ಶಿಸ ಬಯಸುವವರು ಶಾರದಾ ಮಂಟಪದ ಮ್ಯಾನೇಜರ್‌ರವರನ್ನು ಮುಂಚಿತವಾಗಿ ಸಂಪರ್ಕಿಸಬಹುದು.

– **ಅಧ್ಯಕ್ಷರು ಮತ್ತು ಸಂಚಾಲಕರು,** ಯುವ ವೇದಿಕೆ ಮತ್ತು ಕ್ರೀಡಾ ವೇದಿಕೆ

**ತಾ.24-01-2016 ಬೆಳಿಗ್ಗೆ ಗಂಟೆ 9-00ರಿಂದ**
**ಮಹಿಳೆಯರು ಮತ್ತು ಮಕ್ಕಳಿಗಾಗಿ ಶ್ರೀಶಾರದಾ ಮಂಟಪದಲ್ಲಿ**

**ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆಗಳನ್ನು** ಏರ್ಪಡಿಸಲಾಗಿದೆ.

(ವಿವರಗಳು 3ನೇ ಪುಟದಲ್ಲಿ)

– **ಅಧ್ಯಕ್ಷರು ಮತ್ತು ಸಂಚಾಲಕರು,** ಮಹಿಳಾ ವೇದಿಕೆ

# ಸಂಪಾದಕೀಯ.....

**- ಡಾ| ವೈ. ಸುದರ್ಶನ್ ರಾವ್**

ಪಾವಂಜೆ ಹರಿದಾಸ ಲಕ್ಷ್ಮೀ ನಾರ್ಣಪ್ಪಯ್ಯನವರು ನಮ್ಮ ಸಮಾಜದ ಒಬ್ಬ ಮುಖ್ಯ ಹಾಗೂ ಪ್ರಸಿದ್ಧ ಹರಿದಾಸರು. 1854 ರಿಂದ 1924ರ ತನಕ ತಮ್ಮ ಎಪ್ಪತ್ತು ವರ್ಷಗಳ ಜೀವಿತಾವಧಿಯಲ್ಲಿ ಅನೇಕ ಕಡೆ ಹರಿಕಥೆಗಳನ್ನು ನಡೆಸಿದವರು. ಕೀರ್ತನೆಗಳನ್ನು ರಚಿಸಿದವರು ಹಾಗೂ ಅವರು ಒರ್ವ ಆಶು ಕವಿ.

ಇವರು ಸ್ಥಾನಿಕ ಬ್ರಾಹ್ಮಣ ಸಮಾಜದವರಾಗಿದ್ದರೂ ಕಾಶೀ ಮಠದ ಯತಿಗಳಲ್ಲಿ ಅಧ್ಯಯನ ಮಾಡಿ ಅವರ ಸಂಪರ್ಕದಲ್ಲೇ ಬಹುಕಾಲ ಇದ್ದುದರಿಂದ ದ್ವೈತ ಮತಾನುಸಂಧಾನವಾಗಿಯೇ ಹೆಚ್ಚಿನ ಕೀರ್ತನೆಗಳನ್ನೂ ರಚಿಸಿದ್ದಾರೆ. ಲಕ್ಷ್ಮೀನಾರಾಯಣ ಇವರ ಕಾವ್ಯನಾಮ. ಯಕ್ಷಗಾನದಲ್ಲೂ ಇವರ ಅನೇಕ ಕೀರ್ತನೆಗಳು ಜನಪ್ರಿಯವಾಗಿವೆ. ಸುಬ್ರಹ್ಮಣ್ಯ, ರುದ್ರ, ವಿಷ್ಣು, ದುರ್ಗಾದೇವಿಯರನ್ನು ಸ್ತುತಿಸಿ ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ. ಶೋಭಾನೆ ಹಾಡುಗಳು, ಜೋಗುಳ ಹಾಡುಗಳು, ತುಳು ಹಾಡುಗಳು, ದೂರುವ ಹಾಡುಗಳು (ಮದುವೆ ಸಂದರ್ಭದಲ್ಲಿ ಬಳಕೆ), ಕಾರ್ಕಳ ದೀಪೋತ್ಸವ ಪದ್ಯಗಳು, ಹರಿಕಥಾ ಪ್ರಸಂಗದ ಹಾಡುಗಳು ಹೀಗೆ ವೈವಿಧ್ಯಮಯ ರಚನೆಗಳು ಇವರದ್ದಾಗಿದೆ. ಅವರ ಕೃತಿಗಳನ್ನು ಯಕ್ಷಗಾನ ಕಲಾರಂಗ, ಅದಮಾರು ಮಠ ಲೇನ್, ಉಡುಪಿ ಇವರು ಸಂಗ್ರಹಿಸಿ ಪ್ರಕಟಿಸಿದ್ದಾರೆ.

ಕ್ರಿ.ಶ. 1914 ರ ವೇಳೆಗೆ ಹರಿದಾಸರ ಸಮಕಾಲೀನರಾದ ಶ್ರೀಯುತ ವಾಸು ಭಟ್ಟರು. ಪಾವಂಜೆಯಲ್ಲಿ ಸುಬ್ರಹ್ಮಣ್ಯ ದೇವಸ್ಥಾನವನ್ನು ಕಟ್ಟಲು ಆರಂಭಿಸಿದಾಗ ಇವರೂ ಅವರ ಜೊತೆಗೂಡಿ ತಮ್ಮ ಮುಂದಿನ ಕಾಲವನ್ನು ಅಲ್ಲಿಯೇ ಕಳೆದರು. ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿಯ ನೂರಾರು ಕೀರ್ತನೆಗಳನ್ನೂ ರಚಿಸಿ ಹಾಡಿದರು. ತಮ್ಮ ಸ್ಥಿರ ಚರ ಆಸ್ತಿಯನ್ನೂ ಶ್ರೀ ಸುಬ್ರಹ್ಮಣ್ಯ ಸ್ವಾಮಿಯ ಭಂಡಾರಕ್ಕೆ ಬರೆದು ಇದರ ಆದಾಯವು ಇಲ್ಲಿಯ ಸಂಸ್ಕೃತ ಪಾಠಶಾಲೆ ಹಾಗೂ ನಂದಾದೀಪ, ನೈವೇದ್ಯಕ್ಕೆ ಸಲ್ಲತಕ್ಕದೆಂದು ಶಾಸನ ಮಾಡಿದರು.

ಪ್ರತಿ ವರ್ಷ ಮಕರ ಸಂಕ್ರಾಂತಿಯಂದು ಅಹೋರಾತ್ರಿ ಶ್ರೀ ಲಕ್ಷ್ಮೀನಾರ್ಣಪ್ಪಯ್ಯನವರ ಸ್ಮರಣಾರ್ಥ ಆರಾಧನೋತ್ಸವವು ಶ್ರೀ ಪಾವಂಜೆ ಜ್ಞಾನಶಕ್ತಿ ದೇವಸ್ಥಾನದಲ್ಲಿ ಜರಗುತ್ತದೆ.

ಮಕರ ಸಂಕ್ರಾಂತಿಯ ಸಂದರ್ಭದಲ್ಲಿ ಅವರ ಆರಾಧನೋತ್ಸವ ಜರಗುತ್ತಿರುವ ಸಂದರ್ಭದಲ್ಲಿ ಈ ಮಹಾ ಚೇತನವನ್ನು ಸಮಾಜ ಬಾಂಧವರಿಗೆ ನೆನಪಿಸಿಕೊಡುವ ಕಿರುಪ್ರಯತ್ನವಿದು.

ಓದುಗರು ಹೆಚ್ಚಿನ ಮಾಹಿತಿಗಾಗಿ ಹಾಗೂ ಅವರ ಪುಸ್ತಕಕ್ಕಾಗಿ ಯಕ್ಷಗಾನ ಕಲಾರಂಗ, ಅದಮಾರು ಮಠ ಲೇನ್, ಉಡುಪಿ ಇವರನ್ನು ಸಂಪರ್ಕಿಸಬಹುದು.

**ಸಂಪಾದಕ ಮಂಡಳಿ**

ಡಾ| ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ.

-ಸಂಪಾದಕ ಮಂಡಳಿ

**ಸ್ಥಾನಿಕ ಬ್ರಾಹ್ಮಣರ ದೇವಸ್ಥಾನಗಳ ಪರಿಚಯ ಮಾಲೆ-5**

## ಶ್ರೀ ಮಾಸ್ತಿ ಅಮ್ಮನವರ ದೇವಸ್ಥಾನ ಧರ್ಮಸಾಲೆ ಬಾರಕೂರು



365 ದೇವಸ್ಥಾನಗಳಿಂದ ಶೋಭಿಸಲ್ಪಟ್ಟ ಬಾರಕನ್ನೂರು ಯಾ ಬಾರಕೂರು ತುಳುನಾಡಿನಲ್ಲಿ ಐತಿಹಾಸಿಕ ಪರಂಪರೆಗಳಿಂದ ಪ್ರಸಿದ್ಧಿ ಪಡೆದಿದೆ. ಜೈನರ ಹಾಗೂ ಶೈವರ ಆಡಳಿತ ಇಲ್ಲಿ ಪ್ರಾಮುಖ್ಯತೆ ಪಡೆದಿತ್ತು. ಶಕ್ತಿಸ್ವರೂಪಿಣಿಯಾದ ದೇವಿಯ ದೇಗುಲಗಳಲ್ಲಿ ಧರ್ಮಶಾಲೆಯ ಶ್ರೀ ಮಾಸ್ತಿ ದುರ್ಗಾಮ್ಮನವರ ದೇವಸ್ಥಾನವೂ ಒಂದು.

ಈ ಸನ್ನಿಧಿಯು ಒಂದು ಸಾವಿರ ವರ್ಷಗಳ ಇತಿಹಾಸ ಹೊಂದಿದ್ದು 700 ವರ್ಷಗಳ ಹಿಂದೆ ಪಾತ್ರಿ ವೆಂಕಪ್ಪಯ್ಯನವರಿಗೆ ಮೈಸೂರು ಸಂಸ್ಥಾನದವರು 100ಎಕರೆ ಜಾಗವನ್ನು ಉಂಬಳಿಯಾಗಿ ಕೊಟ್ಟಿದ್ದರು. ಅವರ ಮನೆದೇವರಾಗಿದ್ದ ಶ್ರೀ ಮಾಸ್ತಿ ಅಮ್ಮನವರು ಈಗ ಮಾಸ್ತಿ ಬೈಲು ಕುಟುಂಬಸ್ಥರ ಕುಲದೇವರಾಗಿದ್ದಾರೆ ಹಾಗೂ ಊರ ಪರವೂರಿನ ಭಕ್ತಾಧಿಗಳು ಇವರ ಭಕ್ತರಾಗಿದ್ದಾರೆ.

ಗರ್ಭಗೃಹದಲ್ಲಿ ಶ್ರೀ ಮಾಸ್ತಿದುರ್ಗಾ, ಶ್ರೀ ಚಿಕ್ಕಮ್ಮ. ನಂದಿಕೇಶ್ವರ, ಹ್ಯಾಗುಳಿ ಹಾಗೂ ಕ್ಷೇತ್ರಪಾಲ ದೇವರುಗಳಿದ್ದು ಎಲ್ಲಾ ದೇವರುಗಳೂ ರಕ್ತ ಚಂದನ ಮರದ ಮೂರ್ತಿಗಳಾಗಿವೆ. ದೇವಸ್ಥಾನವು ಪಶ್ಚಿಮಾಭಿಮುಖವಾಗಿದೆ. ಶ್ರೀ ಮಾಸ್ತಿ ದುರ್ಗೆಯು ಎರಡು ಕರಗಳನ್ನೂ ಹೊಂದಿದ್ದು ಎಡಕೈಯಲ್ಲಿ ಶ್ರೀ ಚಕ್ರವನ್ನು ಬಲಗೈಯಲ್ಲಿ ಭ್ರೂಣದೊಂದಿಗೆ ಪಿಂಡವನ್ನೂ ಹೊಂದಿದ್ದು. ‘ಪಿಂಡಪಾಣಿ ಭ್ರೂಣಧಾರಿಣಿ ಶ್ರೀ ಮಾಸ್ತಿ ದುರ್ಗಾ ಪರಮೇಶ್ವರಿ’ ಎಂದೇ ಪೂಜಿಸಲ್ಪಡುತ್ತಾಳೆ.

ದೇವಸ್ಥಾನದ ಹೊರಗೆ ನಾಗಸಾನ್ನಿಧ್ಯವಿದ್ದು ಅವರ ವಲ್ಮಿಕವು ನೆಲಮಟ್ಟದಿಂದ ಗೋಡೆಯ ತುತ್ತ ತುದಿಯವರೆಗೆ ಹಬ್ಬಿದೆ. ದೇವಸ್ಥಾನದ ಹೊರಗೆ 700 ವರ್ಷಗಳ ಹಿಂದಿನ ಬೆಣಚುಕಲ್ಲಿನ ಆಕರ್ಷಕವಾದ ಬಾವಿ ಇದೆ.

ಪ್ರತೀ ವರ್ಷ ಧನು ಸಂಕ್ರಮಣದಿಂದ ಆರಂಭವಾಗಿ ವಾರ್ಷಿಕೋತ್ಸವ, ಢಕ್ಕೆ ಬಲಿ ಸೇವೆಯು ಮೂರು ದಿನ ಜರುಗುತ್ತದೆ. ಪ್ರತಿದಿನ ನಿತ್ಯಪೂಜೆ, ಹಾಲು ಪರಮಾನ್ನ, ಹರಿವಾಣ ನೈವೇದ್ಯ, ಬೆಳ್ಳಿಯ ತೊಟ್ಟಿಲ ಮಗು ಸೇವೆ, ದನಕರು ಸೇವೆ, ಸೋಣಾರಾತಿ, ಭಜನಾಸೇವೆ ಮೊದಲಾದ ಸೇವೆಗಳು ಜರುಗುತ್ತವೆ.

ದೇವಸ್ಥಾನವು ಸದ್ಯ ಮುಜರಾಯಿ ಇಲಾಖೆಗೆ ಸೇರಿದ್ದು ಶ್ರೀ ಮಾಸ್ತಿಬೈಲು ಕುಟುಂಬದ ಅನಂತ ಪದ್ಮನಾಭರವರು ಪ್ರಧಾನ ಅರ್ಚಕರು ಹಾಗೂ ಆಡಳಿತ ಮೊಕ್ತೇಸರರಾಗಿದ್ದಾರೆ. ನಮ್ಮ ಸಮಾಜ ಬಾಂಧವರು ತಕ್ಷಣವೇ ಈ ದೇವಸ್ಥಾನದ ಅಭಿವೃದ್ಧಿಯ ಬಗ್ಗೆ ಗಮನ ಹರಿಸಿ ಈ ದೇವಸ್ಥಾನವನ್ನು ಜೀರ್ಣೋದ್ಧಾರಗೊಳಿಸಿ ಉಳಿಸಿಕೊಳ್ಳಬೇಕಾದ ಅಗತ್ಯವಿದೆ.

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ ಶ್ರೀ ಅನಂತ ಪದ್ಮನಾಭ, ಪ್ರಧಾನ ಅರ್ಚಕರು 9448108618.**

ಶ್ರೀಶಾರದಾ ಪತ್ರಿಕೆಯ ಓದುಗರಿಗೆ
ಮಕರ ಸಂಕ್ರಾಂತಿ ಹಾಗೂ
ಉತ್ತರಾಯಣ ಪರ್ವಕಾಲದ
ಶುಭಾಶಯಗಳು



ಅಭಿನಂದನೆಗಳು
ನಾಟ್ಯ ವಿದುಷಿ
ಡಾ. ಮನಾಲಿ ಪವನ್‌ರಾವ್‌ರಿಗೆ
-ಬಂಧುಮಿತ್ರರು

*With Best Compliments from :*



Clinic : 0820-6529474
Mobile : 9886093199
drsanathrao@gmail.com

**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

**JALAJA SKIN CARE AND COSMETOLOGY CLINIC**
Medicare Centre, Behind Pai Electronics, Court Back Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (11-30 a.m. to 2-00 p.m.)

*Power Cut !!!???*
*Install Best Quality Inverters...*

Mobile : 9483242111
K.Suresh Rao : 9036443884
Tel : 0820-2523436



**DEEPA ENTERPRISES**
Business Complex, Ground Floor,
Near Telephone Exchange, Hotel Udupi Residency Road,
Udupi-576101.
Inverters, UPS, Batteries, Repairs Maintenance & Charging

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
“ಗೃಹ ಸಾಲ”
(ಸಂಘದ ಪ್ರಾಥಮಿಕ ಸದಸ್ಯರಿಗೆ 11.50%)

| | | |
|---|---|---|
| ವಾಹನ ಸಾಲ | : | 13% |
| ಹಳೆಯ ವಾಹನ | : | 15% |
| ಆಭರಣ ಸಾಲ | : | 13% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 13% |
| ಅಡಮಾನ ಸಾಲ | : | 13% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 181 ದಿನಗಳು | : 6%, | 182 ದಿನಗಳಿಂದ 364 ದಿನಗಳು | : 7%, |
| 1 ವರ್ಷ ಮತ್ತು 2 ವರ್ಷಕ್ಕಿಂತ ಕಡಿಮೆ | : 10% | 2 ವರ್ಷ ಮತ್ತು ಹೆಚ್ಚಿನ ಅವಧಿಗೆ | : 10.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ – ☎ 2522408 ಕುಕ್ಕಿಕಟ್ಟೆ ಶಾಖೆ – ☎ 2592133
ಪಡುಬಿದ್ರಿ ಶಾಖೆ – ☎ 2556608 ಕೋಟೇಶ್ವರ ಶಾಖೆ – ☎ 9341854114

## ಶ್ರೀ ಶಾರದ ಮಂಟಪದಲ್ಲಿ ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆಗಳು

ತಾ.24-01-2016ನೇ ಆದಿತ್ಯವಾರ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಕುಂಜಿಬೆಟ್ಟು ಉಡುಪಿ ಇದರ ಯುವ ಹಾಗೂ ಕ್ರೀಡಾ ವೇದಿಕೆ ಮತ್ತು ಮಹಿಳಾ ವೇದಿಕೆಯಿಂದ ಸಮಾಜ ಬಾಂಧವರಿಗಾಗಿ ಕ್ರಿಕೆಟ್ ಹಾಗೂ ಇತರ ಒಳಾಂಗಣ ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಈ ಬಗ್ಗೆ ವಿವರ ಹೀಗಿದೆ.

ತಾ.24-01-2016ನೇ ಮುಂಜಾನೆ 7.30ಕ್ಕೆ ಶ್ರೀ ಶಾರದಾ ಮಂಟಪದಲ್ಲಿ ಬೆಳಗ್ಗಿನ ಉಪಹಾರದ ನಂತರ 9 ಗಂಟೆಗೆ ಎಂ.ಜಿ.ಎಂ ಕಾಲೇಜಿ ಮೈದಾನದಲ್ಲಿ ಕ್ರಿಕೆಟ್ ಪಂದ್ಯಾಟದ ಉದ್ಘಾಟನೆ ನೆರವೇರಲಿದೆ. ಈ ಕಾರ್ಯಕ್ರಮಕ್ಕೆ ಅಲೆವೂರು ಶ್ಯಾಮರಾವ್ ಇವರು ಮುಖ್ಯ ಅತಿಥಿಯಾಗಿ ಆಗಮಿಸಲಿದ್ದಾರೆ. ಅಲ್ಲಿ ಯುವಕರಿಗೆ, ಮಕ್ಕಳಿಗೆ ಹಾಗೂ ಹಿರಿಯ ನಾಗರಿಕರಿಗೆ ಕ್ರಿಕೆಟ್ ಪಂದ್ಯಾಟವು ಸಂಜೆಯ ತನಕ ನಡೆಯಲಿದ್ದು, ಸಂಜೆ 6 ಗಂಟೆಗೆ ವಿಜೇತ ತಂಡಗಳಿಗೆ ಬಹುಮಾನ ವಿತರಣಾ ಸಮಾರಂಭ ನೆರವೇರಲಿದೆ. ಈ ಸಮಾರಂಭಕ್ಕೆ ಶ್ರೀ ಐ.ಪಿ.ನಾಗರಾಜ್ ರಾವ್, ಡಿ.ಜಿ.ಎಂ ಸಿಂಡಿಕೇಟ್ ಬ್ಯಾಂಕ್ ಹಾಗೂ ಶ್ರೀ ಪಿ.ಎನ್. ಗಣೇಶ್ ರಾವ್, ಇನ್‌ಸ್ಪೆಕ್ಟರ್, ಲೋಕಾಯುಕ್ತ ಹಾಗೂ ಶ್ರೀ ಯುವರಾಜ್, ಉಡುಪಿ ನಗರಸಭಾಧ್ಯಕ್ಷರು ಇವರು ಆಗಮಿಸಲಿದ್ದಾರೆ.

ಬೆಳಿಗ್ಗೆ ಶ್ರೀ ಶಾರದಾ ಮಂಟಪದಲ್ಲಿ 9ಗಂಟೆಯಿಂದ ಮಕ್ಕಳಿಗೆ ಹಾಗೂ ಮಹಿಳೆಯರಿಗೆ ಹಾಗೂ ಹಿರಿಯ ನಾಗರಿಕರಿಗೆ ವಿವಿಧ ಸ್ಪರ್ಧೆಗಳಿದ್ದು ಅವುಗಳ ವಿವಿರ ಹೀಗಿದೆ.

**ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆಗಳು :**

**3 ವರ್ಷದ ಒಳಗಿನ ಮಕ್ಕಳಿಗೆ :**

ಬಲೂನು ಹೆಕ್ಕಿ ತರುವುದು,

**3 ರಿಂದ 5 ವರ್ಷದ ಮಕ್ಕಳಿಗೆ**

1. ದಿಂಬು ಪಾಸ್ ಮಾಡುವುದು
2. ಚಿತ್ರದಲ್ಲಿರುವ ಹಣ್ಣುಗಳನ್ನು ಗುರುತಿಸುವುದು.

**1 ರಿಂದ 3 ನೇ ತರಗತಿಯವರಿಗೆ**

1. ಬಕೆಟ್‌ಗೆ ಬಾಲ್ ಹಾಕುವುದು
2. ಪುಸ್ತಕ ತಲೆಯಲ್ಲಿಟ್ಟು ನಡೆಯುವುದು.

**4 ರಿಂದ 6ನೇ ತರಗತಿಯವರಿಗೆ**

1. ಬಲೂನ್ ಊದಿ ಒಡೆಯುವುದು.
2. ನಿಂಬೆಹಣ್ಣು ಚಮಚದಲ್ಲಿಟ್ಟು ನಡೆಯುವುದು.

**7 ರಿಂದ 9 ನೇ ತರಗತಿಯವರಿಗೆ**

1. ಸ್ಕಿಪ್ಪಿಂಗ್ (ಹಗ್ಗ ಸ್ಪರ್ಧಾಳುಗಳೇ ತರಬೇಕು)
2. ಸ್ಟ್ರಾದಲ್ಲಿ ನೀರೆಳೆದು ಗ್ಲಾಸಿಗೆ ಭರ್ತಿ ಮಾಡುವುದು.

**10 ರಿಂದ 12ನೇ ತರಗತಿಯವರಿಗೆ**

1. ಸೀರೆ ಮಡಿಸುವುದು.
2. ನೆನಪು ಶಕ್ತಿ (Memory test)

**18 ಮತ್ತು 18ಕ್ಕೆ ಮೇಲ್ಪಟ್ಟ ಮಹಿಳೆಯರಿಗೆ**

Bombing the city

**70ಕ್ಕಿಂತ ಮೇಲ್ಪಟ್ಟವರಿಗೆ**

ಧಾನ್ಯಗಳನ್ನು ಗುರುತಿಸುವುದು

**ಹಿರಿಯ ನಾಗರಿಕರಿಗೆ (ಗಂಡಸರಿಗೆ)**

ರಿಂಗ್ ಕಂಬಕ್ಕೆ ಹಾಕುವುದು

ಮಧ್ಯಾಹ್ನದ ಭೋಜನದ ನಂತರ ವಿಜೇತರಿಗೆ ಬಹುಮಾನ ವಿತರಣಾ ಕಾರ್ಯಕ್ರಮವಿದೆ. ಮುಖ್ಯ ಅತಿಥಿಯಾಗಿ ಡಾ. ನಾಗರತ್ನ ಇವರು ಆಗಮಿಸಲಿದ್ದಾರೆ.

ಸಮಾಜ ಬಾಂಧವರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸ ಬೇಕೆಂದು ಆಡಳಿತ ಮಂಡಳಿ ವಿನಂತಿಸಿದೆ.

## ಸಹಸ್ರ ಚಂದ್ರ ದರ್ಶನ ಶಾಂತಿ-ಮನದಾಳದಿಂದ ಪುಸ್ತಕ ಬಿಡುಗಡೆ

ನಮ್ಮ ಸಮಾಜದ ಹಿರಿಯ ಇಂಜಿನಿಯರ್, ಕರ್ನಾಟಕ ಸರಕಾರದ ಪಿಡಬ್ಲ್ಯೂಡಿ ಇಲಾಖೆಯ ನಿವೃತ್ತ ಕಾರ್ಯದರ್ಶಿ ಶ್ರೀ ಎಲ್ಲೂರು ಉಮೇಶ ರಾಯರು ತಾವು 80ನೇ ಹುಟ್ಟುಹಬ್ಬವನ್ನು ಆಚರಿಸಿಕೊಂಡ ಪ್ರಯುಕ್ತ ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯ ಕ್ಲಾಸಿಕ್ ಆರ್ಚಡ್ಸ್‌ನ ತಮ್ಮ ಸ್ವಗೃಹದಲ್ಲಿ ತಾ.13-12-2015 ನೇ ರವಿವಾರ ಸತ್ಯನಾರಾಯಣ ಪೂಜೆ, ಗಣಹೋಮ, ಮೃತ್ಯುಂಜಯ ಹೋಮ, ನವಗ್ರಹ ಹೋಮ ಮತ್ತು ಧನ್ವಂತರಿ ಹೋಮ ಸಹಿತ ಸಹಸ್ರ ಚಂದ್ರದರ್ಶನ ಶಾಂತಿಯನ್ನು ವೈಭವದಿಂದ ಆಚರಿಸಿದರು. ಈ ಸಂದರ್ಭದಲ್ಲಿ ನೂರಾರು ಬಂಧುಗಳು ಹಾಗೂ ಅಭಿಮಾನಿಗಳು ಹಾಜರಿದ್ದು ಅವರಿಗೆ ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ಉಮೇಶರಾಯರ ಅಭಿಮಾನಿಗಳು ಹಾಗೂ ಮಕ್ಕಳು ಪ್ರಕಟಿಸಿ ಬಿಡುಗಡೆಗೊಳಿಸಿದ ‘ಮನದಾಳದಿಂದ’ ಪುಸ್ತಕ ಬಿಡುಗಡೆಯನ್ನು ಅವರ ತಮ್ಮ ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷ ವೈ ಭುವನೇಂದ್ರ ರಾಯರ ಉಪಸ್ಥಿತಿಯಲ್ಲಿ ನಮ್ಮ ಸಮಾಜದ ಹಿರಿಯ, ಕವಿ ಶ್ರೀ ಅಪಯಶ ಎಂದು ಖ್ಯಾತರಾದ ಶ್ರೀ ಅದ್ಯಪಾಡಿ ಯಶವಂತ ಶರ್ಮರು ಬಿಡುಗಡೆಗೊಳಿಸಿ ಸಾರ್ಥಕ ಜೀವನಕ್ಕಾಗಿ ಉಮೇಶ್‌ರಾವ್ ದಂಪತಿಗಳನ್ನು ಹಾರ್ದಿಕವಾಗಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಶ್ರೀ ಉಮೇಶ ರಾಯರು ತಾವು ಇಲ್ಲಿಯ ತನಕ ನಡೆದು ಬಂದ ಹಾದಿಯನ್ನು ಮೆಲುಕು ಹಾಕಿದರು. ಪುತ್ರ ಶ್ರೀ ಸುಧೀರ್ ರಾವ್ ಧನ್ಯವಾದವಿತ್ತರು. ‘ಮನದಾಳದಿಂದ’ ಪುಸ್ತಕದಲ್ಲಿ ಉಮೇಶ ರಾಯರ ಬಗ್ಗೆ ಹದಿನೈದು ಲೇಖನಗಳಿದ್ದು ಫೋಟೋ ಆಲ್ಬಂನ್ನು ಒಳಗೊಂಡಿದೆ.

(ಫೋಟೋ ಕೊನೆಯ ಪುಟದಲ್ಲಿ)

## ಪರ್ಯಾಯಕ್ಕೆ ಹೊರೆ ಕಾಣಿಕೆ

ತಾ.08-01-2016ನೇ ಶುಕ್ರವಾರ ಸಂಜೆ ಪೇಜಾವರ ಮಠದ ಶ್ರೀ ಶ್ರೀಗಳ ಪರ್ಯಾಯ ಮಹೋತ್ಸವಕ್ಕೆ ಉಡುಪಿ ಬ್ರಾಹ್ಮಣ ಸಭಾದ ಅಂಗವಾಗಿ ನೆರವೇರಿದ ಹೊರಕಾಣಿಕೆ ಸಮರ್ಪಣಾ ಕಾರ್ಯಕ್ರಮದಲ್ಲಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಕುಂಜಿಬೆಟ್ಟು, ಉಡುಪಿ ಇವರು ಭಕ್ತಿ ಪೂರ್ವಕವಾಗಿ ಹೊರಕಾಣಿಕೆಯನ್ನು ಮೆರವಣಿಗೆಯ ಮೂಲಕ ಸಮರ್ಪಿಸಿದರು. ಮೆರವಣಿಗೆಯು ಸಂಜೆ 4 ಗಂಟೆಗೆ ಜೋಡುಕಟ್ಟೆಯ ಶ್ರೀ ಗೋವಿಂದ ಕಲ್ಯಾಣ ಮಂಟಪದಲ್ಲಿ ಆರಂಭವಾಗಿ ಉಡುಪಿಯ ಮುಖ್ಯಬೀದಿಯಲ್ಲಿ ಸಾಗಿ ಸಂಜೆ ಆರರ ಹೊತ್ತಿಗೆ ಶ್ರೀ ಕೃಷ್ಣಮಠವನ್ನು ಸೇರಿತು. ಮೆರವಣಿಗೆಯಲ್ಲಿ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರುಗಳು, ಕಾರ್ಯದರ್ಶಿಗಳು, ಜೊತೆಕಾರ್ಯದರ್ಶಿಗಳು, ಕೋಶಾಧಿಕಾರಿಗಳು, ಸಲಹೆಗಾರರು ಹಾಗೂ ನೂರಾರು ಸಮಾಜ ಬಾಂಧವರು ಭಾಗವಹಿಸಿದ್ದರು. ಶ್ರೀ ಶ್ರೀಗಳು ಬಂದವರೆಲ್ಲರಿಗೂ ಶಾಲು ಹೊದಿಸಿ, ಫಲಮಂತ್ರಾಕ್ಷತೆಯಿತ್ತು, ಆಶೀರ್ವದಿಸಿ ಪರ್ಯಾಯ ಮಹೋತ್ಸವಕ್ಕೆ ಬರುವಂತೆ ಆಮಂತ್ರಣವಿತ್ತರು.

(ಫೋಟೋ ಕೊನೆಯ ಪುಟದಲ್ಲಿ)

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಸುರತ್ಕಲ್ : ವಾರ್ಷಿಕ ಮಹಾಸಭೆ

ದಿನಾಂಕ 08-11-2015ನೇ ರವಿವಾರದಂದು ನಮ್ಮ ಸಂಘದ ವಾರ್ಷಿಕ ಮಹಾಸಭೆಯು ಬೆಳಿಗ್ಗೆ ಗಂಟೆ 9-30ಕ್ಕೆ ಸರಿಯಾಗಿ ಗೋವಿಂದದಾಸ ಕಾಲೇಜಿನ ಬಳಿ ಇರುವ ಮಾನಸ ಮನೆಯ ಮೇಲ್ಭಾಗದ ‘‘ವಿವೇಕಾನಂದ ಸಭಾಗೃಹ’’ದಲ್ಲಿ ಜರಗಿತು. ಸಂಘದ ಅಧ್ಯಕ್ಷರಾದ ಶ್ರೀ ಕೆ. ಮಾಧವರಾವ್ ಆಗಮಿಸಿದ ಸಮಾಜ ಬಾಂಧವರೆಲ್ಲರನ್ನೂ ಸಭೆಗೆ ಸ್ವಾಗತಿಸಿದರು. ಈ ಮಹಾಸಭೆಯಲ್ಲಿ ನೂತನ ಆಡಳಿತ ಸಮಿತಿಯನ್ನು ಸರ್ವಾನುಮತದಿಂದ ಆರಿಸಲಾಯಿತು. ಶ್ರೀ ಕೆ. ಮಾಧವ ರಾವ್ ಅಧ್ಯಕ್ಷರಾಗಿಯೂ, ಶ್ರೀ ಗೋಪಾಲಕೃಷ್ಣ ಮತ್ತು ಶ್ರೀ ವಾಸುದೇವ ಶಾನುಭಾಗ್‌ರವರು ಉಪಾಧ್ಯಕ್ಷರಾಗಿಯೂ, ಶ್ರೀ ಎಂ. ಪಾಲಚಂದ್ರ ಶರ್ಮ ಕಾರ್ಯದರ್ಶಿಯಾಗಿಯೂ, ಶ್ರೀ ಸುಕುಮಾರ ಎಂ.ಯು.. ಶ್ರೀ ಪ್ರವೀಣ್‌ಕುಮಾರ್ ಜೊತೆ ಕಾರ್ಯದರ್ಶಿಯಾಗಿಯೂ, ಶ್ರೀ ಸಿ.ರಾಘವೇಂದ್ರ ರಾವ್ ಇವರು ಕೋಶಾಧಿಕಾರಿಗಳಾಗಿಯೂ ಆಯ್ಕೆಯಾಗಿರುತ್ತಾರೆ. ಮಹಾಸಭೆಯ ಬಳಿಕ ಶ್ರೀ ಐ. ಚಂದ್ರಕಾಂತ ರಾವ್ ಇನ್ನಾರವರ ಉಪಸ್ಥಿತಿಯಲ್ಲಿ ನಮ್ಮ ಸಮಾಜದ ಸಾಧಕರಾದ ಶ್ರೀ ಬಿ. ಚಂದ್ರಶೇಖರ್ ರಾವ್ (ಜನರಲ್ ಮೆನೇಜರ್, ಕರ್ಣಾಟಕ ಬ್ಯಾಂಕ್) ಹಾಗೂ ಶ್ರೀ ಕೆ. ಅಶೋಕ ಕುಮಾರ್ ರಾವ್ ಮೂಡಬೆಟ್ಟು (ಗ್ರಾಮ ಪಂಚಾಯತ್ ಸದಸ್ಯರು ಕಟಪಾಡಿ) ಇವರೀರ್ವರನ್ನು ಸನ್ಮಾನಿಸಲಾಯಿತು. ವಾರ್ಷಿಕ ಮಹಾಸಭೆಯಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡಿ ಗೌರವಿಸಲಾಯಿತು. ಆ ಬಳಿಕ ಮಹಿಳಾ ವೇದಿಕೆ ಹಾಗೂ ಯುವ ವೇದಿಕೆಯ ಸದಸ್ಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಿತು. ಭೋಜನದ ಬಳಿಕ ಕಾರ್ಯಕ್ರಮವು ಮುಕ್ತಾಯಗೊಂಡಿತು.

(ಫೋಟೋ ಕೊನೆಯ ಪುಟದಲ್ಲಿ)

## ಮಾರ್ಪಳ್ಳಿ ಆರ್. ಮಂಜುನಾಥ್‌ರವರ ಕೃತಿ ಬಿಡುಗಡೆ

ಶ್ರೀ ಮಹಾಗಣಪತಿ ಪ್ರಕಾಶನ ಶಿವಮೊಗ್ಗ ಇವರು ದಿ.02-01-2016ರಂದು ಬೆಂಗಳೂರಿನ ಗಾಂಧಿನಗರದ ಕನಕವೃತ್ತದಲ್ಲಿರುವ ಕರ್ನಾಟಕ ಕುರುಬರಸಂಘದ ಸಭಾಂಗಣದಲ್ಲಿ ಶ್ರೀ ಮಾರ್ಪಳ್ಳಿ ಆರ್ ಮಂಜುನಾಥ ಎಂ.ಎ. ಇವರು ಬರೆದ ‘ಅರವತ್ತರ ಹೊಸ್ತಿಲಲಿ’ (ಕವನ ಸಂಕಲನವನ್ನು) ಮತ್ತು ‘ಕಲ್ಪನಾ ಲೋಕದಲ್ಲಿ ಪುಟ್ಟಿ’ ಎಂಬ ಮಕ್ಕಳ ಕಿರುಕಾದಂಬರಿಯನ್ನು ಬಿಡುಗಡೆ ಮಾಡುವ ಸಮಾರಂಭವನ್ನು ಏರ್ಪಡಿಸಿದ್ದರು. ಈ ಸಮಾರಂಭಕ್ಕೆ ಕರ್ನಾಟಕ ರಾಜ್ಯ ಸರಕಾರಿ ಪಡಿತರ ವಿತರಕರ ಸಂಘ (ರಿ) ಬೆಂಗಳೂರು ರಾಜ್ಯಾಧ್ಯಕ್ಷರಾದ ಶ್ರೀ ಕೃಷ್ಣಪ್ಪ, ರಾಜ್ಯ ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಬಿ.ಸಿ ಮಾದಪ್ಪ, ಚಿಂತಕರಾದ ಶ್ರೀ ಆರ್.ಗೋಪಾಲಕೃಷ್ಣ, ಬೆಂಗಳೂರು ಕೇಂದ್ರ ವಲಯದ ಆಹಾರ ಇಲಾಖೆಯ ಉಪನಿರ್ದೇಶಕರಾದ ಶ್ರೀ ಎಸ್.ಬಿ.ನರೇಂದ್ರ, ಬೆಂಗಳೂರು ಎ.ಪಿ.ಎಂ.ಸಿ.ಯ ಅಧ್ಯಕ್ಷರಾದ ಶ್ರೀ ರಮೇಶ್ ಲಾಹೋಟೆ ಇವರು ಭಾಗವಹಿಸಿದ್ದರು. ಶ್ರೀ ಆರ್. ಗೋಪಾಲಕೃಷ್ಣ ಚಿಂತಕರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಲೇಖಕರಾದ ಶ್ರೀ ಮಾರ್ಪಳ್ಳಿ ಆರ್.ಮಂಜುನಾಥ ಇವರು ಬರೆದ ‘ಅರವತ್ತರ ಹೊಸ್ತಿಲಲಿ’ ಮತ್ತು ‘ಕಲ್ಪನಾ ಲೋಕದಲ್ಲಿ ಪುಟ್ಟಿ’ ಕೃತಿಯನ್ನು ಲೋಕಾರ್ಪಣೆ ಮಾಡಿ ಲೇಖಕರಿಗೆ ಶುಭಕೋರಿದರು. ಪುಸ್ತಕದ ಬಗ್ಗೆ ಶ್ರೀ ಎಸ್.ಬಿ.ನರೇಂದ್ರ ಉಪನಿರ್ದೇಶಕರು ಮಾತನಾಡಿ ಶ್ರೀ ಮಾರ್ಪಳ್ಳಿ ಆರ್.ಮಂಜುನಾಥ ಕೃತಿಯಲ್ಲಿ ಜೀವನಾನುಭವವಿದ್ದು ಕವನಗಳಲ್ಲಿ ವೈವಿಧ್ಯತೆ ತುಂಬಿದ್ದು ಒಮ್ಮೆ ಮುಗ್ಧವಾಗಿ ಒಮ್ಮೆ ಪ್ರೌಢವಾಗಿ, ಒಮ್ಮೆ ಹತಾಶರಾಗಿ ಒಮ್ಮೆ ದಾರ್ಶನಿಕರಾಗಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿರುವ ಬಗ್ಗೆ ಪ್ರಶಂಸೆ ವ್ಯಕ್ತ ಪಡಿಸಿದರು.

ಲೇಖಕ ಮಾರ್ಪಳ್ಳಿ ಆರ್. ಮಂಜುನಾಥ ಇವರು ಮಾತನಾಡಿ ಬರಹವೇ ತಮ್ಮ ಜಗತ್ತೆಂದು, ತಮ್ಮ ಅನಿಸಿಕೆ, ಭಾವನೆಗಳಿಗೆ, ಸಾಂತ್ವನ ನೀಡುವುದಲ್ಲದೆ ಕಾವ್ಯವೇ ತಮ್ಮ ಮಾನಸ ಸ್ವತ್ತೆಂದು ತಿಳಿಸಿ, ತಮ್ಮ ಲೇಖನಗಳಿಗೆ ಪ್ರೋತ್ಸಾಹ ನೀಡಿದ ಎಲ್ಲರನ್ನು ಸ್ಮರಿಸಿದರು.ಈ ಸಂದರ್ಭದಲ್ಲಿ ಶ್ರೀ ಮಾರ್ಪಳ್ಳಿ ಆರ್. ಮಂಜುನಾಥ ಇವರನ್ನು ಅಧ್ಯಕ್ಷರು ಕರ್ನಾಟಕ ರಾಜ್ಯ ಸರಕಾರಿ ಪಡಿತರ ವಿತರಕರ ಸಂಘ ಮತ್ತು ಪದಾಧಿಕಾರಿಗಳು ಹಾಗೂ ವಿವಿಧ ಸಂಘಗಳ ಮತ್ತು ಸಾರ್ವಜನಿಕರು ಸನ್ಮಾನಿಸಿ ಗೌರವಿಸಿದರು. ಶ್ರೀ ಮಹಾಗಣಪತಿ ಪ್ರಕಾಶನ ಶಿವಮೊಗ್ಗ ಇವರು ಶ್ರೀ ಎಂ.ಪ್ರಸಾದ್ ಅಸಿಸ್ಟೆಂಟ್ ಪ್ರೊಫೆಸರ್, ಬಿಐಇಟಿ ಕಾಲೇಜ್, ದಾವಣಗೆರೆ ಇವರು ಕುವೆಂಪು ಯೂನಿವರ್ಸಿಟಿಯಿಂದ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ಡಾಕ್ಟರೇಟ್ ಪದವಿ ಪಡೆದ ಬಗ್ಗೆ ಪ್ರಶಂಸಿಸಿ, ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಬಂಧು-ಮಿತ್ರರು-ಸಾರ್ವಜನಿಕರು ಈ ಸನ್ಮಾನ ಸಮಾರಂಭದಲ್ಲಿ ಪಾಲ್ಗೊಂಡರು. ಶ್ರೀ ಎಂ .ಪ್ರಸಾದ್ ಇವರು ಕೃತಜ್ಞತೆಯನ್ನು ಸಲ್ಲಿಸಿದರು.

ಪ್ರಾರಂಭದಲ್ಲಿ ಕು।ಅಚಿಂತ್ಯ ಇವರಿಂದ ಪ್ರಾರ್ಥನೆ ನಡೆಯಿತು. ಕಾರ್ಯಕ್ರಮವನು ಶ್ರೀ ಮಾರ್ಪಳ್ಳಿ ಪ್ರಮೋದ್, ಬಿ.ಇ. ಇವರು ನಿರ್ವಹಿಸಿ ನಿರೂಪಣೆ ಮಾಡಿದರು.

(ಫೋಟೋ ಕೊನೆಯ ಪುಟದಲ್ಲಿ)

## ಅವನೀಂದ್ರರ ‘ಭೂಮಿಗಾನ ಆಕಾಶಯಾನ’ ಲೋಕಾರ್ಪಣೆ

ದಿನಾಂಕ 22-12-2015ರಂದು ದೆಹಲಿಯ ಲೇಖಕ ಡಾ। ವೈ. ಅವನೀಂದ್ರನಾಥ್ ರಾವ್ ಅವರ ‘ಭೂಮಿಗಾನ ಆಕಾಶಯಾನ’ ರೇಡಿಯೋ ಬರಹಗಳ ಕೃತಿಯು ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರದಲ್ಲಿ ಬಿಡುಗಡೆಯಾಯಿತು. ಇದು ಡಾ। ಅವನೀಂದ್ರನಾಥ ರಾಯರು ಆಕಾಶವಾಣಿ ಕಲಾವಿದರಾಗಿ ನೀಡಿದ ವಿಚಾರಗಳ ಸಂಕಲನ ಪುಸ್ತಕವಾಗಿದೆ.

ಬಿಡುಗಡೆ ಸಮಾರಂಭದಲ್ಲಿ ಶ್ರೀ ಈಶ್ವರಯ್ಯನವರು ಮಾತನಾಡುತ್ತ ಘನ ವಿಚಾರಗಳನ್ನು ಸರಳ ಭಾಷೆಯಲ್ಲಿ ಹೇಳುವ ಕಲೆಯಿಂದ ರೇಡಿಯೋ ಕೆಲವು ವಿಶಿಷ್ಟ ಬರಹಗಾರರನ್ನು ನೀಡಿದೆ ಎಂಬುದಾಗಿ ಅಭಿಪ್ರಾಯಪಟ್ಟರು. ಸಮಾರಂಭದಲ್ಲಿ ಉಪಸ್ಥಿತರಿದ್ದ ಹಿರಿಯ ವಿಮರ್ಶಕ ಪ್ರೊ। ಮುರಳೀಧರ ಉಪಾಧ್ಯ ಹಿರಿಯಡಕ ಅವರು ಅವನೀಂದ್ರರ ಕೃತಿ ವಿನೂತನ ಬಗೆಯದು ಎಂಬ ಅನಿಸಿಕೆ ವ್ಯಕ್ತಪಡಿಸಿದರು. ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರದ ನಿರ್ದೇಶಕ ಪ್ರೊ। ಹೇರಂಜೆ ಕೃಷ್ಣ ಭಟ್ ಕೃತಿ ಬಿಡುಗಡೆಗೊಳಿಸಿ ಶುಭ ಹಾರೈಸಿದರು. ಹಿರಿಯ ವಿದ್ವಾಂಸ ಡಾ। ಪಾದೆಕಲ್ಲು ವಿಷ್ಣು ಭಟ್, ಪ್ರೊ। ರಾಘವ ನಂಬಿಯಾರ್, ಡಾ। ಉಪ್ಪಂಗಳ ರಾಮ ಭಟ್, ಡಾ। ವೈ. ರವೀಂದ್ರನಾಥ್ ರಾವ್, ವೈ. ಭುವನೇಂದ್ರ ರಾವ್ ಮೊದಲಾದವರು ಉಪಸ್ಥಿತರಿದ್ದರು.

(ಫೋಟೋ ಕೊನೆಯ ಪುಟದಲ್ಲಿ)

## ಶ್ರೀಶಾರದಾ ವೇದಿಕೆಯ ಮಹಾಪೋಷಕರು

**ದಿ। ಅಂಬಲಪಾಡಿ ಕೃಷ್ಣರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ। ಲೋಕೇಶ್‌ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ। ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್**

# ಶ್ರೀಮತಿ ಜಯಶ್ರೀ ಶ್ರೀಕೃಷ್ಣಯ್ಯ ಅನಂತಪುರ

ಕಾಸರಗೋಡು ಕನ್ನಡ ಸಾಂಸ್ಕೃತಿಕ ಕ್ಷೇತ್ರದಲ್ಲಿ ಶ್ರೀಮತಿ ಜಯಶ್ರೀ ಶ್ರೀಕೃಷ್ಣಯ್ಯ ಅನಂತಪುರ ಅವರ ಹೆಸರು ಚಿರಪರಿಚಿತ. ಇವರು ಕುಮಟಾ ಸಮೀಪದ ಗುಡೇ ಅಂಗಡಿಯ ಖ್ಯಾತ ಜ್ಯೋತಿಷಿ ದಿ. ಸುಬ್ರಾಯ ಶ್ಯಾನುಭೋಗ್ ಹಾಗೂ ದಿ. ಸಾವಿತ್ರಮ್ಮ ದಂಪತಿಯ ಸುಪುತ್ರಿ. ಕಾಸರಗೋಡಿನ ಕುಂಬಳೆಯ ಸಮೀಪದ ಪ್ರಸಿದ್ಧ ಮನೆತನವಾದ ಅನಂತಪುರ ದೊಡ್ಡ ಮನೆಯ ಸಾಹಿತಿ ಶ್ರೀ ಶ್ರೀಕೃಷ್ಣಯ್ಯ ಅವರನ್ನು ವಿವಾಹವಾಗಿ ಅನಂತಪುರಕ್ಕೆ ಬಂದರು

1978 ರಲ್ಲಿ ಅನಂತಪುರ ಸಮೀಪದ ನಾಯ್ಕಾಪುವಿನಲ್ಲಿ ನೂತನವಾಗಿ ಅಸ್ತಿತ್ವಕ್ಕೆ ಬಂದಂತಹ ಮಹಿಳಾ ಮಂಡಲದ ಪ್ರಥಮ ಕಾರ್ಯದರ್ಶಿಯಾಗಿ ಆಯ್ಕೆಯಾಗಿ ಸಾರ್ವಜನಿಕ ಜೀವನಕ್ಕೆ ಪಾದಾರ್ಪಣೆಗೈದರು. ಕನ್ನಡ ಬಾಲವಾಡಿ ಹಾಗೂ ಮಹಿಳಾ ಮಂಡಲದ ಕಟ್ಟಡಗಳ ನಿರ್ಮಾಣಕ್ಕೆ ಮಂಜೇಶ್ವರದ ಬ್ಲಾಕ್ ಪಂಚಾಯತನ್ನು ಸಂಪರ್ಕಿಸಿ ಸಕ್ರಿಯರಾಗಿ ದುಡಿದು ಜನಪ್ರಿಯರಾದರು. ಮುಂದೆ ಕಾಸರಗೋಡು ಕನ್ನಡ ಸಾಹಿತ್ಯ ಪರಿಷತ್ತು, ಗಡಿನಾಡ ಘಟಕದ ಅಧ್ಯಕ್ಷೆ ದಿ. ಡಾ.ಲಲಿತಾ ಎನ್.ಭಟ್ ಹಾಗೂ ಹಲವು ಗಣ್ಯರ ಉಪಸ್ಥಿತಿಯಲ್ಲಿ ಖ್ಯಾತ ಸಾಹಿತಿ, ಕನ್ನಡ ಹೋರಾಟಗಾರ ಶ್ರೀ ಪಾಟೀಲ ಪುಟ್ಟಪ್ಪ ದಂಪತಿಗಳಿಂದ ಉದ್ಘಾಟನೆಗೊಂಡ 'ಕಾಸರಗೋಡು ಕನ್ನಡ ಭಾವಸಂಗಮ' ಇದರ ಪ್ರಥಮ ಕಾರ್ಯದರ್ಶಿಯಾಗಿ ಆಯ್ಕೆಯಾದರು.

2005ರಲ್ಲಿ ಕ.ಸಾ.ಪದ ಅಧ್ಯಕ್ಷ ಖ್ಯಾತ ನ್ಯಾಯವಾದಿ ಶ್ರೀ ಐ.ವಿ.ಭಟ್ ಅವರು ನೂತನವಾಗಿ ಸ್ಥಾಪಿಸಲ್ಪಟ್ಟ ಪ್ರಥಮ ಮಹಿಳಾ ಸಮಿತಿಯ ಅಧ್ಯಕ್ಷೆಯನ್ನಾಗಿ ಶ್ರೀಮತಿ ಜಯಶ್ರೀ ಅನಂತಪುರ ಅವರನ್ನು ಆಯ್ಕೆ ಮಾಡಿದರು. ಇದೇ ಸಮಯದಲ್ಲಿ ಮಹಿಳಾ ಯಕ್ಷಗಾನ ತಾಳಮದ್ದಳೆಯ ಬಳಗ 'ಯಕ್ಷಸಮುದ್ಯತಾ' ತಂಡವು ಖ್ಯಾತ ಕವಿ ಶ್ರೀ ಕೆ.ವಿ. ತಿರುಮಲೇಶರಿಂದ ಉದ್ಘಾಟನೆಗೊಂಡಿತು. ಇದರ ಪ್ರಥಮ ಅಧ್ಯಕ್ಷೆಯಾಗಿ ಜಯಶ್ರೀಯವರು ಆಯ್ಕೆಯಾದರು. ತದನಂತರ ಅಸ್ತಿತ್ವಕ್ಕೆ ಬಂದ 'ಗಾನ ಮಂಜೂಷಾ' ಎಂಬ ಸಂಗೀತ ಬಳಗದ ಉದ್ಘಾಟನೆ ಖ್ಯಾತ ಚಿತ್ರಕಲಾವಿದರಾದ ಶ್ರೀ ಪಿ.ಎಸ್. ಪುಣಿಂಚಿತ್ತಾಯರಿಂದ ನಡೆಯಿತು. ಅದರ ಅಧ್ಯಕ್ಷೆಯಾಗಿ ಜಯಶ್ರೀ ಅನಂತಪುರ ಆಯ್ಕೆಯಾದರು. ಈ ಎರಡು ಸಂಘಟನೆಗಳು ಜಿಲ್ಲೆಯಾದ್ಯಂತ ನೀಡಿದ ಕಾರ್ಯಕ್ರಮಗಳು ಹಾಗೂ ಮಂಗಳೂರು ಆಕಾಶವಾಣಿಯ ಕಾರ್ಯಕ್ರಮಗಳು ಜನಪ್ರಿಯಗೊಂಡವು.

ಜಯಶ್ರೀ ಅನಂತಪುರರವರು ಕನ್ನಡ ಸಾಹಿತ್ಯ ಪರಿಷತ್ತಿನ ತಮ್ಮ ಸಹ ಸದಸ್ಯೆಯರ ಜೊತೆಗೂಡಿ ಜಿಲ್ಲೆಯಾದ್ಯಂತ ನೀಡಿದ ಹಲವಾರು ಕಾರ್ಯಕ್ರಮಗಳು ಯಶಸ್ವಿಯಾಗಿವೆ. ಯಕ್ಷಗಾನ ತಾಳಮದ್ದಳೆಯಲ್ಲಿ ಕರ್ಣ, ಅಂಬೆ, ಕೌರವ, ಶ್ರೀಕೃಷ್ಣ, ರಾವಣ, ದ್ರೌಪದಿ ಮುಂತಾದ ಪಾತ್ರಗಳಲ್ಲಿ ಮಿಂಚಿ ತಾಳಮದ್ದಳೆ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದಾರೆ. ಇವರ ಯಕ್ಷಸಮುಧ್ಯತಾ ಬಳಗವು ಮಂಗಳೂರು ಆಕಾಶವಾಣಿಯಿಂದ 'ಬಿ ಗ್ರೇಡ್' ಪಡೆದು ಆಕಾಶವಾಣಿಯಲ್ಲಿ ಕಾರ್ಯಕ್ರಮ ನೀಡಿ ಯಶಸ್ವಿಯಾಗಿದೆ. ಶ್ರೀ ಎಡನೀರು ಮಠ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕರ್ನಾಟಕ ಸರಕಾರ ಹಾಗೂ ಕೊಯಮತ್ತೂರಿನ ಕನ್ನಡ ಸಂಘಟನೆಗಳ ಆಶ್ರಯದಲ್ಲಿ ನಡೆದ ಕನ್ನಡ ಸಮ್ಮೇಳನದಲ್ಲಿ, ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಹಿಂದೂ ಐಕ್ಯವೇದಿಕೆ, ಕರಾವಳಿ ಲೇಖಕಿ ವಾಚಕಿಯರ ಸಂಘ, ಖ್ಯಾತ ಯಕ್ಷಗಾನ ಕಲಾವಿದರಾದ ದಿ. ಪೆರ್ಲ ಕೃಷ್ಣಭಟ್ ಅವರ ಪ್ರಥಮ ಸಂಸ್ಮರಣಾ ವೇದಿಕೆ, ಕಾಸರಗೋಡು ಸರಕಾರಿ ಕಾಲೇಜಿನ ದಸರಾ ನಾಡ ಹಬ್ಬದ ವೇದಿಕೆ ಹೀಗೆ ಜಿಲ್ಲೆಯಾದ್ಯಂತ ಕನ್ನಡ ಸಂಘಟನೆಗಳ ಆಶ್ರಯದಲ್ಲಿ ತಾಳಮದ್ದಳೆ ಕಾರ್ಯಕ್ರಮ ನೀಡಿ ಯಶಸ್ವಿಯಾಗಿದ್ದಾರೆ. ಎರಡು ಅವಧಿಗೆ ಸಾಹಿತ್ಯ ಪರಿಷತ್ತಿನ ಮಹಿಳಾ ಸಂಚಾಲಕಿಯಾಗಿದ್ದ ಜಯಶ್ರೀಯವರು ಜಿಲ್ಲಾ ಮಟ್ಟದ ಸುಗಮ ಸಂಗೀತ ಸ್ಪರ್ಧೆ, ಸುಗಮ ಸಂಗೀತ ಶಿಬಿರ, ಜಾನಪದ ಹಾಡಿನ ಸ್ಪರ್ಧೆ, ಜಿಲ್ಲೆಯ ಕವಿ ಯಾ ಕವಿಯತ್ರಿಯರ ಗೀತ ಗಾಯನ ಸ್ಪರ್ಧೆ ಏರ್ಪಡಿಸಿದ್ದಾರೆ. ಹಲವು ಪ್ರತಿಭಾವಂತ ಮಹಿಳೆಯರನ್ನು ಗುರುತಿಸಿ ಸನ್ಮಾನಿಸಿದ್ದಾರೆ. ಹಲವರಿಗೆ ಉಚಿತವಾಗಿ ಸುಗಮ ಸಂಗೀತವನ್ನು ಹೇಳಿಕೊಟ್ಟಿದ್ದಾರೆ. ಹಲವು ಭಾವಗೀತೆಗಳಿಗೆ ರಾಗ ಸಂಯೋಜನೆಯನ್ನೂ ಮಾಡಿರುತ್ತಾರೆ. ಇವರು ಸುಗಮ ಸಂಗೀತದಲ್ಲಿ ಮಂಗಳೂರು ಆಕಾಶವಾಣಿಯ 'ಬಿ ಗ್ರೇಡ್' ಕಲಾವಿದೆ. 'ಕಲ್ಯಾಣ ಮಸ್ತು' ಎಂಬ ಮದುವೆ ಸಂಪ್ರದಾಯದ ಹಾಡುಗಳ ಸಿ.ಡಿ.ಯನ್ನು ಮಂಗಳೂರಿನ ಕ್ಯಾಡ್ ಸೆಂಟರಿನವರು ಹೊರತಂದು ಮಾಜಿ ಮಂತ್ರಿಗಳಾದ ಶ್ರೀ ಕೃಷ್ಣಪಾಲೆಮಾರ್‌ರವರಿಂದ ಬಿಡುಗಡೆಗೊಳಿಸಿದ್ದಾರೆ. ಕಾಸರಗೋಡು ಸಿಟಿಚಾನಲ್‌ನಲ್ಲೂ ಇವರ ಕಾರ್ಯಕ್ರಮ ಪ್ರಸಾರಗೊಂಡಿವೆ. ಖ್ಯಾತ ಯಕ್ಷಗಾನ ಕಲಾವಿದರಾದ ದಿ. ಶ್ರೀ ಶೇಣಿ ಗೋಪಾಲಕೃಷ್ಣ ಭಟ್ ಇವರ ಸ್ಮರಣೆಯ ಅಂಗವಾಗಿ ಶ್ರೀ ಎಡನೀರು ಮಠದಲ್ಲಿ ನಡೆದ ಮಹಿಳಾ ಗೋಷ್ಠಿಯ ಅಧ್ಯಕ್ಷ ಸ್ಥಾನ, ಕರಾವಳಿ ಲೇಖಕಿ ವಾಚಕಿ ಸಂಘದ ಬೆಳ್ಳಿ ಹಬ್ಬದ ನಿಮಿತ್ತ ನಡೆದ ಕಲೆ ಹಾಗೂ ಸಂಸ್ಕೃತಿ ಎಂಬ ವಿಚಾರಗೋಷ್ಠಿಯಲ್ಲಿ ಸಾರಾ ಅಬೂಬಕರ್, ಡಾ।ವಸುಂದರ ಭೂಪತಿ ಮುಂತಾದವರೊಡನೆ ಕಾಸರಗೋಡಿನ ಪ್ರತಿನಿಧಿಯಾಗಿ ಭಾಗವಹಿಸಿದ್ದಾರೆ. ಹಲವು ಧಾರ್ಮಿಕ ವೇದಿಕೆಯಲ್ಲಿ ಧಾರ್ಮಿಕ ಭಾಷಣ ಮಾಡಿದ್ದಾರೆ. ಸುಗಮ ಸಂಗೀತ, ಚಿತ್ರಗೀತೆ ಮುಂತಾದ ಸ್ಪರ್ಧೆಗಳಲ್ಲಿ ತೀರ್ಪುಗಾರರಾಗಿ ಸಹಕರಿಸಿದ್ದಾರೆ. ಸಂಗೀತ ಕ್ಷೇತ್ರಕ್ಕೆ ಇವರ ಕೊಡುಗೆಯನ್ನು ಗುರುತಿಸಿ ಇತ್ತೀಚೆಗೆ ಕಾಸರಗೋಡಿನಲ್ಲಿ ರಂಗಚಿನ್ನಾರಿ ಸಂಸ್ಥೆ ಹಾಗೂ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ಆಶ್ರಯದಲ್ಲಿ ನಡೆದ ಸಂಗೀತ ಸಮ್ಮೇಳನದಲ್ಲಿ ಶಾಲು ಹೊದಿಸಿ ಸ್ಮರಣಿಕೆ ನೀಡಿ ಗೌರವಿಸಿದ್ದಾರೆ.

ಕಾಸರಗೋಡು ಶಿವಸ್ಥಾನಿಕ ಬ್ರಾಹ್ಮಣ ಸಂಘದ ಪ್ರಥಮ ಮಹಿಳಾ ಅಧ್ಯಕ್ಷೆಯಾಗಿ ಆಯ್ಕೆಯಾದ ಶ್ರೀಮತಿ ಜಯಶ್ರೀಯವರು ತಮ್ಮ ಎರಡು ಅವಧಿಯ ಅಧ್ಯಕ್ಷ ಸ್ಥಾನದಿಂದ ಹಲವು ಜನಪರ ಕಾರ್ಯಕ್ರಮಗಳನ್ನು ನೀಡಿ ಯಶಸ್ವಿಯಾಗಿದ್ದಾರೆ. ಮಾತ್ರವಲ್ಲ ಕಳೆದ 25 ವರುಷಗಳಿಂದ ನಮ್ಮ ಸಮಾಜ ಬಾಂಧವರ ವಿವಾಹವೇದಿಕೆಯಲ್ಲಿ ಹಲವು ಹುಡುಗ ಹುಡುಗಿಯರು ವಿವಾಹವಾಗಲು ಉಚಿತವಾಗಿ ಸೇವೆಸಲ್ಲಿಸಿದ್ದಾರೆ. 'ಕಾಸರಗೋಡಿನ ಪ್ರತಿಭಾನ್ವಿತರು' ಎಂಬ ಲೇಖನ ಮಾಲೆಯನ್ನು ಸುಲಗ್ನ ಮಾಸ ಪತ್ರಿಕೆಯಲ್ಲಿ ಬರೆದು ಜನಪ್ರಿಯರಾಗಿದ್ದಾರೆ. ಈಗಲೂ ಊರ ಪರಊರಿನ ಸಮಾಜಬಾಂಧವರಿಗೆ ವಿವಾಹ ವೇದಿಕೆಯಲ್ಲಿ ಉಚಿತವಾಗಿ ಸೇವೆ ಮಾಡುತ್ತಾ ಇದ್ದಾರೆ.

ಮಗನಾದ ಕಥೆಗಾರ-ಸಾಹಿತಿ ಸಂತೋಷ್ ಅನಂತಪುರ, ಸೊಸೆ ಸ್ವಪ್ನಾ ಸಂತೋಷ್, ಮೊಮ್ಮಗಳು ದೇವಯಾನಿ ಬೆಂಗಳೂರಿನಲ್ಲಿ ವೃತ್ತಿ ಸಂಬಂಧವಾಗಿ ನೆಲೆಸಿದ್ದಾರೆ. ಮಗಳು ಸಂಗೀತಾ ಕುಮಾರ್, ಅಳಿಯ ಚೈತ್ರಾಕುಮಾರ್ ಮೊಮ್ಮಕ್ಕಳಾದ ಅದ್ವೇತ್ ಕುಮಾರ, ಅರ್ಜುನ ಕುಮಾರ ಕತಾರಿನ ದೋಹಾದಲ್ಲಿ ನೆಲೆಸಿದ್ದಾರೆ. ತಮ್ಮ ಪತಿ ಕವಿ, ಸಾಹಿತಿ ಶ್ರೀ ಶ್ರೀ ಕೃಷ್ಣಯ್ಯ ಅನಂತಪುರ ಅವರ ನಿರಂತರ ಪ್ರೋತ್ಸಾಹ, ಸಹಕಾರ, ಮಾರ್ಗದರ್ಶನವು ತಮ್ಮಲ್ಲಿ ಸಾಧನೆಗೆ ಕಾರಣವಾಗಿದೆ ಎಂದು ಸ್ಮರಿಸಿಕೊಳ್ಳುವ ಜಯಶ್ರೀಯವರು ತಮ್ಮ ಪತಿ ಶ್ರೀ ಶ್ರೀಕೃಷ್ಣಯ್ಯ ಅನಂತಪುರ ಅವರ ಜೊತೆ ಅನಂತಪುರ ದೊಡ್ಡಮನೆಯಲ್ಲಿ ನೆಮ್ಮದಿಯ ಜೀವನವನ್ನು ನಡೆಸುತ್ತಿದ್ದಾರೆ. ಇವರಿಗೂ ಇವರ ಕುಟುಂಬಕ್ಕೂ ಭಗವಂತನು ಎಲ್ಲಾ ವಿಧವಾದ ಸೌಭಾಗ್ಯವನ್ನು ನೀಡಿ ಅನುಗ್ರಹಿಸಲಿ ಎಂದು ಹಾರೈಸೋಣ. **-ಸುನಾದ**

(ಫೋಟೋ ಕೊನೆಯ ಪುಟದಲ್ಲಿ)

# ನೃತ್ಯ ಕಲಾವಿದ ಶ್ರೀ ಆರ್. ಮೋಹನ್ ರಾವ್



ಕಲೆ ಯಾರ ಸೊತ್ತೂ ಅಲ್ಲ. ಕಲಾ ಸರಸ್ವತಿ ಯಾರಿಗೆ? ಯಾವಾಗ? ಹೇಗೆ? ಒಲಿದು ಬರುತ್ತಾಳೆ. ಎಂಬುದು ಹೇಳಲಸಾಧ್ಯ. ಹೌದು ಹೀಗೊಬ್ಬರಿಗೆ ಕಲಾಸರಸ್ವತಿ ಒಲಿದು ಹರಸಿದ್ದಾಳೆ. ಅವರೇ ಮೈಸೂರಿನ ಆರ್. ಮೋಹನರಾವ್. ಇವರ ತಂದೆ ದಿ. ರಂಗನಾಥರಾವ್, ತಾಯಿ ಶ್ರೀಮತಿ ದಿ. ಸುಶೀಲಮ್ಮ (ಶಿಕ್ಷಕಿ). ಈ ದಂಪತಿಯ 7 ಮಕ್ಕಳಲ್ಲಿ ಹಿರಿಯವರೇ ಶ್ರೀ ಆರ್.ಮೋಹನರಾವ್. ಬೆಳೆಯ ಸಿರಿ ಮೊಳಕೆಯಲ್ಲಿ ಎಂಬ ನಾಣ್ನುಡಿಯಂತೆ ಪುಟ್ಟ ಮಗು ರೇಡಿಯೋದಲ್ಲಿ ಬರುವ ಗೀತೆಗಳನ್ನು ತಾನು ಹಾಡುತ್ತಾ ಹೆಜ್ಜೆ ಹಾಕಿ ನರ್ತಿಸುವುದನ್ನು ನೋಡಿದ ಪಾಲಕರು ಮಗುವಿನ ಅಭಿರುಚಿ ತಿಳಿದು ಮಗುವಿಗೆ ಕರ್ನಾಟಕ ಸಂಗೀತದ ಜೊತೆ ಜೊತೆಗೆ ಭರತನಾಟ್ಯ ಶಿಕ್ಷಣವನ್ನು ಕಲಿಯಲು ತರಗತಿಗೆ ಸೇರಿಸಿದರು. ಶ್ರೀಯುತರು ಕರ್ನಾಟಕ ಸಂಗೀತವನ್ನು ಮೈಸೂರಿನ ವಿದ್ವಾನ್ ದಿ. ಮಹಾದೇವ ಸ್ವಾಮಿಯವರಲ್ಲಿ ಕಲಿತರು. ಆ ಸಮಯದಲ್ಲಿ ಮೈಸೂರಿನಲ್ಲಿ ನೆಲೆಸಿ ಪ್ರಸಿದ್ಧಿ ಪಡೆದ ನಮ್ಮವರೇ ಆದ ಕಾಸರಗೋಡು ಜಿಲ್ಲೆಯ ಮರ್ಧಂಬೈಲು ವಿದ್ವಾನ್ ದಿ. ಎಂ.ವಿಷ್ಣುದಾಸರು ಭರತನಾಟ್ಯವನ್ನು ತಮ್ಮ ಸಂಸ್ಥೆಯಲ್ಲಿ ಕಲಿಸುತ್ತಿದ್ದರು. ಅದೇ ಸಂಸ್ಥೆಯಲ್ಲಿ ಸುಮಾರು ಹತ್ತು ವರುಷಗಳ ಕಾಲ ಭರತನಾಟ್ಯ ಶಿಕ್ಷಣವನ್ನು ಪಡೆದರು. 7 ವರುಷದ ಪುಟ್ಟ ಬಾಲಕ ನೃತ್ಯ ಸಂಗೀತದ ಒಳ ಹೊರಗನ್ನು ಬೇಗನೆ ಕಲಿತಾಗ ಪ್ರತಿಭಾವಂತ ಶಿಷ್ಯ ದೊರಕಿದ ಸಂಭ್ರಮ, ಸಂತೋಷ ಗುರುಗಳ ಪಾಲಿಗಾಗಿತ್ತು. ಈ ಅವಧಿಯಲ್ಲಿ ಶ್ರೀಯುತರು ಸುಮಾರು 600ಕ್ಕಿಂತಲೂ ಹೆಚ್ಚು ಕಾರ್ಯಕ್ರಮಗಳನ್ನು ಸಾರ್ವಜನಿಕ ವೇದಿಕೆಯಲ್ಲಿ ನೀಡಿ ಬಹುಮಾನ ಪಡೆದು ಕಲಾಭಿಮಾನಿಗಳ ಮನಸ್ಸಿನಲ್ಲಿ ಸ್ಥಿರವಾಗಿ ನೆಲೆಸಿದ್ದರು.

ಮೋಹನರಾಯರ ಕಲಾಪ್ರತಿಭೆಯನ್ನು ತಿಳಿದ ಆಗಿನ ಮೈಸೂರು ಮಹಾರಾಜರಾದ ದಿ. ಜಯಚಾಮರಾಜ ಒಡೆಯರು ತಮ್ಮ 'ತಂಡಿಸಡತ್' ಅರಮನೆಗೆ ಖಾಸಗಿಯಾಗಿ ನೃತ್ಯವನ್ನು ವೀಕ್ಷಿಸಲು ಮೋಹನರಾಯರನ್ನು ಕರೆಯಿಸಿಕೊಂಡು ಅವರಿಂದ ತಾಂಡವ ನೃತ್ಯ ಹಾಗೂ ಬೇಟೆಗಾರ ನೃತ್ಯವನ್ನು ಮಾಡಿಸಿ ಹರ್ಷಚಿತ್ತರಾಗಿದ್ದರು. ನಾಲ್ಕೈದು ಬಾರಿ ಕರೆಯಿಸಿಕೊಂಡು ನೃತ್ಯವನ್ನು ವೀಕ್ಷಿಸಿ ಸಂತೋಷಗೊಂಡ ಮಹಾರಾಜರು ಸೂಕ್ತ ಬಹುಮಾನಗಳನ್ನು ನೀಡಿ ಪುರಸ್ಕರಿಸಿದರು. ಮೈಸೂರಿನಲ್ಲಿ ನಡೆದ ಸಮಾರಂಭವೊಂದರಲ್ಲಿ ಆಗಿನ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಮಾನ್ಯ ದಿವಂಗತ ಬಿ.ಡಿ. ಜತ್ತಿಯವರು ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಅಂದು ಶ್ರೀಯುತ ಮೋಹನರಾಯರ ಭರತನಾಟ್ಯವನ್ನು ನೋಡಿ ಆನಂದಿಸಿದ ಮಾನ್ಯ ಮುಖ್ಯಮಂತ್ರಿಗಳು ಬಹುಮಾನ ನೀಡಿದ್ದು ಮಾತ್ರವಲ್ಲ ತಮಗಾಗಿ ತಂದಿರಿಸಿದ ಹಾರವನ್ನು ತರುಣ ಮೋಹನರಾಯರ ಕೊರಳಿಗೆ ಹಾಕಿ ಅಭಿನಂದಿಸಿ ಮೆಚ್ಚುಗೆ ನುಡಿಯನ್ನಾಡಿ ಶುಭ ಹಾರೈಸಿ ಪುರಸ್ಕರಿಸಿದ್ದರು. ಈ ಅವಧಿಯಲ್ಲೇ ಸತತ ನಾಲ್ಕು ವರುಷಗಳ ಕಾಲ ಪ್ರಸಿದ್ಧವಾದ ಮೈಸೂರು ದಸರಾ ಕಲಾ ಪ್ರದರ್ಶನದಲ್ಲಿ ಭಾಗವಹಿಸಿ, ತಮ್ಮ ಕಲಾಪ್ರತಿಭೆಯನ್ನು ಮೆರೆದು ಪ್ರಥಮ ಬಹುಮಾನವನ್ನು ಪಡೆದದ್ದು ಶ್ರೀಯುತರ ಪ್ರತಿಭೆಗೆ ಹಿಡಿದ ಕನ್ನಡಿಯಾಗಿದೆ.

ಮುಂದೆ 1961ರಲ್ಲಿ ಮೈಸೂರು ಅರಮನೆಯ ಕಲಾವಿದೆ, ಕರ್ನಾಟಕ ಸಂಗೀತ ಹಾಗೂ ಭರತನಾಟ್ಯ ಕಲಾವಿದೆ, ಪದ್ಮಭೂಷಣ ಪುರಸ್ಕೃತ ವಿದುಷಿ ದಿ. ಡಾ ವೆಂಕಟಲಕ್ಷ್ಮಮ್ಮನವರಲ್ಲಿ ತಮ್ಮ ಮುಂದಿನ ಸಂಗೀತ ಭರತನಾಟ್ಯ ಶಿಕ್ಷಣವನ್ನು ಪಡೆದು ಮೈಸೂರು ವಿಶ್ವವಿದ್ಯಾಲಯದಿಂದ ಡಿಪ್ಲೊಮಾ ಇನ್ ಭರತನಾಟ್ಯ ಪದವಿಯನ್ನು ಪಡೆದುಕೊಂಡರು. ಈ ಅವಧಿಯಲ್ಲೂ ಶ್ರೀಯುತರು ಅನೇಕ ಕಾರ್ಯಕ್ರಮಗಳನ್ನು ಪ್ರಮುಖ ವೇದಿಕೆಯಲ್ಲಿ ನೀಡಿ ಕಲಾಭಿಮಾನಿಗಳ ಮನ ಸೂರೆಗೊಂಡಿದ್ದಾರೆ. ಮುಂದೆ 1972ರಿಂದ 1987 ರವರೆಗೆ ಸರಿಸುಮಾರು 15 ವರುಷಗಳ ಕಾಲ ಮಣಿಪಾಲ ಅಕಾಡೆಮಿಯ ಫೈನ್ ಆರ್ಟ್ಸ್ ಸ್ಕೂಲ್ ಉಡುಪಿಯಲ್ಲಿ ನೃತ್ಯ ಶಿಕ್ಷಕರಾಗಿ ಸೇವೆ ಸಲ್ಲಿಸಿರುತ್ತಾರೆ. ಈ ಅವಧಿಯಲ್ಲಿ ಸುತ್ತಮುತ್ತಲಿನ ಊರುಗಳಲ್ಲಿ ನಡೆಯುವ ವಿವಿಧ ಸಭೆ ಸಮಾರಂಭಗಳಲ್ಲಿ ಹಲವು ಉತ್ಸವಾದಿಗಳಲ್ಲಿ ತಮ್ಮ ವಿದ್ಯಾರ್ಥಿಗಳಿಂದ ಭರತನಾಟ್ಯ ಪ್ರದರ್ಶನವನ್ನು ಪ್ರದರ್ಶಿಸಿ ಉತ್ತಮ ಗುರುವೆಂದೇ ಪ್ರಸಿದ್ಧರಾಗಿದ್ದರು. ಉಡುಪಿ ಕೃಷ್ಣ ಮಠದ ರಾಜಾಂಗಣದಲ್ಲಿ ತಮ್ಮ ಶಿಷ್ಯರಿಂದ ಕಾರ್ಯಕ್ರಮ ನೀಡಿದ್ದು ಶ್ರೀಯುತರ ಪ್ರತಿಭೆಗೆ ವಿಶೇಷ ಮೆರಗನ್ನು ನೀಡಿತ್ತು. ತಮ್ಮ ವಿದ್ಯಾರ್ಥಿಗಳ ಹೆಚ್ಚಿನ ಎಲ್ಲಾ ಕಾರ್ಯಕ್ರಮಗಳಿಗೆ ಹಿನ್ನಲೆ ಹಾಡುಗಾರಿಕೆ ಹಾಗೂ ನಟುವಾಂಗವನ್ನು ಸುಮಾರು ಮೂರು ಮೂರುವರೆ ತಾಸುಗಳ ಕಾಲ ತಾವೇ ನಿರ್ವಹಿಸುತ್ತಿದ್ದುದು ಇವರ ವಿಶೇಷತೆ. ಇದೆಲ್ಲವನ್ನು ಗುರುತಿಸಿದ ಉಡುಪಿ ಪೇಜಾವರ ಮಠದ ಪರಮ ಪೂಜ್ಯ ಶ್ರೀ ಶ್ರೀ ಸ್ವಾಮೀಜಿಯವರು ಶ್ರೀಯುತ ಮೋಹನರಾಯರನ್ನು ಸನ್ಮಾನಿಸಿ ಆಶೀರ್ವದಿಸಿದ್ದಾರೆ. ಆಳ್ವಾಸ್ ಎಜುಕೇಶನ್ ಸಂಸ್ಥೆಯ ಮುಖ್ಯಸ್ಥರಾದ ಶ್ರೀ ಡಾ. ಮೋಹನ ಆಳ್ವರು ತಮ್ಮ ಕಾಲೇಜು ದಿನಗಳಲ್ಲಿ ಕಲಾ ವೇದಿಕೆಯಲ್ಲಿ ನಡೆಯುವ ಹಲವು ಸ್ಪರ್ಧೆಗಳಲ್ಲಿ ಭಾಗವಹಿಸಲು ಮೋಹನ ರಾಯರಿಂದ ನೃತ್ಯವನ್ನು ಕಲಿತು ಬಹುಮಾನಗಳನ್ನು ಪಡೆದುಕೊಂಡದ್ದನ್ನು ಸ್ಮರಿಸಿಕೊಳ್ಳುತ್ತಾರೆ.

1987ರಲ್ಲಿ ಮೋಹನರಾಯರು ತಮ್ಮದೇ ಆದ ನಟರಾಜ ಕಲಾಶಾಲಾ ನೃತ್ಯ ಸಂಸ್ಥೆಯನ್ನು ಹುಟ್ಟು ಹಾಕಿದರು. ಈ ಸಂಸ್ಥೆಯ ಉದ್ಘಾಟನೆಯನ್ನು ಕಲಾಭಿಮಾನಿಗಳೂ, ಕಲಾ ಪೋಷಕರೂ, ನಮ್ಮ ಸಮಾಜ ಬಾಂಧವರೂ ಆದ ಶ್ರೀಯುತ ಅಲೆವೂರು ರಮೇಶ ಶ್ಯಾನುಭೋಗ್ ಸತಾರಾ ನೆರವೇರಿಸಿ ಶುಭಾಶಂಸನೆಗೈದಿದ್ದಾರೆ. ಶ್ರೀಯುತರು ಶಿರಸಿ, ಬೆಳಗಾಂ, ಸತಾರದಲ್ಲಿ ತಮ್ಮ ಭರತನಾಟ್ಯ ತರಬೇತಿ ಕೇಂದ್ರಗಳನ್ನು ತೆರೆದು ಅಪಾರ ಶಿಷ್ಯ ವೃಂದವನ್ನು ಹೊಂದಿರುತ್ತಾರೆ. ಇವರ ಹಲವು ಶಿಷ್ಯರು ರಂಗಪ್ರವೇಶವನ್ನು ಮಾಡಿದ್ದಾರೆ. ಕಿರುತೆರೆಯಲ್ಲೂ ಮಿಂಚಿದ್ದಾರೆ. ಶ್ರೀಯುತರ ಪ್ರತಿಭೆಯನ್ನು ಗುರುತಿಸಿದ ಸತಾರಾ ಆಕಾಶವಾಣಿಯು ಮೋಹನರಾಯರೊಡನೆ

(6ನೇ ಪುಟಕ್ಕೆ...)



ತಂತ್ರಾಡಿ ವಿಶ್ವನಾಥ ಶಾನುಭೋಗ್
94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576 102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ಪಶ್ಚಿಮ ನೆಲದಲ್ಲಿ ಟಿಸಿಲೊಡೆದ ಶೃಂಗೇರಿಯ ಶ್ರೀ ಶಾರದಾಪೀಠ

ವರದಿ : ಡಾ। ಎಚ್.ವಿ. ನರಸಿಂಹಮೂರ್ತಿ, ಕುಂದಾಪುರ.

ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾಪೀಠದ ಶಾಖೆಗಳು ಭಾರತದಲ್ಲಿ ಮಾತ್ರವಲ್ಲ, ಇದೀಗ ಪಶ್ಚಿಮದ ನೆಲದಲ್ಲೂ ಟಿಸಿಲೊಡೆಯತೊಡಗಿವೆ. ಅಮೇರಿಕ ಮತ್ತು ಕೆನಡ ದೇಶಗಳಲ್ಲಿರುವ ಶೃಂಗೇರಿ ಶ್ರೀ ಶಾರದಾ ಪೀಠದ ಕೆಲವು ಮಂದಿ ಆಸಕ್ತ ಶಿಷ್ಯರು ಸೇರಿ, ಶೃಂಗೇರಿ ವಿದ್ಯಾಭಾರತೀ ಫೌಂಡೇಶನ್ (ಎಸ್.ವಿ.ಬಿ.ಎಫ್.) ಎಂಬ ಸಂಸ್ಥೆಯೊಂದನ್ನು ಸ್ಥಾಪಿಸಿದರು. ಶೃಂಗೇರಿ ಶ್ರೀ ಶಾರದಾಪೀಠದ ಜಗದ್ಗುರು ಮಹಾಸ್ವಾಮಿಗಳವರ ಮಾರ್ಗದರ್ಶನದಲ್ಲಿ ವೇದಪ್ರಣೀತವಾದ ಸನಾತನ ಧರ್ಮವನ್ನು ರಕ್ಷಿಸಿ ಪ್ರಸಾರಮಾಡುವುದು, ವೇದೋಕ್ತವಾದ ಕರ್ಮಗಳನ್ನು ಪಾಲಿಸುತ್ತಾ ದೈನಂದಿನ ಬದುಕಿನಲ್ಲಿ ಅವುಗಳನ್ನು ಅಳವಡಿಸುವುದು, ಆದಿಶಂಕರರು ಬೋಧಿಸಿದ ಅದ್ವೈತ ಸಿದ್ಧಾಂತ ಕುರಿತು ಅಧ್ಯಯನ ಮತ್ತು ಸಂಶೋಧನೆ, ವೇದಾಧ್ಯಯನಕ್ಕೆ ಪ್ರೋತ್ಸಾಹ, ಧಾರ್ಮಿಕ-ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು-ಇವೆಲ್ಲ ಇದರ ಉದ್ದೇಶಗಳು.

ಪರಮಪೂಜ್ಯ ಜಗದ್ಗುರು ಶ್ರೀಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಪರಿಪೂರ್ಣ ಅನುಗ್ರಹ, ಆಶೀರ್ವಾದ ಮತ್ತು ಮಾರ್ಗದರ್ಶನದಲ್ಲಿ ಶೃಂಗೇರಿ ಶ್ರೀ ಶಾರದಾಪೀಠದ ಸಾಗರೋತ್ತರ ವಿಸ್ತರಣೆಯ ರೂಪದಲ್ಲಿ ಸ್ಥಾಪಿತವಾದ ಈ ಸಂಸ್ಥೆ ಲಾಭದಾಯಕವಲ್ಲದ (Nonprofit) ಧಾರ್ಮಿಕ ಮತ್ತು ದತ್ತಿಸಂಸ್ಥೆಯಾಗಿ ಅಮೇರಿಕ ಮತ್ತು ಕೆನಡ ದೇಶದಾದ್ಯಂತ ಪ್ರಸಿದ್ಧಿಹೊಂದಿದೆ.

ಈ ಸಂಸ್ಥೆಯ ಸ್ಥಾಪಕ ಅಧ್ಯಕ್ಷರಾದ ಡಾ। ಯಜ್ಞ ಸುಬ್ರಹ್ಮಣ್ಯನ್ ಅವರು ಶೃಂಗೇರಿ ಶ್ರೀ ಶಾರದಾ ಪೀಠದ ನಿಷ್ಠಾವಂತ ಶಿಷ್ಯರು. ವೇದ-ವೇದಾಂತಗಳನ್ನು ಅಧ್ಯಯನ ಮಾಡಿ, ಕಳೆದ ಇಪ್ಪತ್ತು ವರ್ಷಗಳಿಂದ ತಾನು ವಾಸವಾಗಿರುವ ನ್ಯೂ ಜೆರ್ಸಿಯ ಆಸು-ಪಾಸಿನ ಆಸಕ್ತರಿಗೆಲ್ಲ ಬೋಧಿಸುವವರು. ವೇದ ಸಮ್ಮೇಳನ, ವೈದಿಕ ವಿದ್ವಾಂಸರ ಸಮ್ಮಾನ, ಶಿಥಿಲವಾದ ದೇವಾಲಯಗಳ ಜೀರ್ಣೋದ್ಧಾರ, ಭಗವದ್ಗೀತೆಯ ಪ್ರಸಾರ, ಗೋಸಂರಕ್ಷಣೆ, ಅತಿರುದ್ರದಂತಹ ಮಹಾಯಾಗಗಳ ನಿರ್ವಹಣೆ-ಇತ್ಯಾದಿಗಳ ಮೂಲಕ ದೇಶ-ವಿದೇಶಗಳಲ್ಲಿ ಪ್ರಸಿದ್ಧರು. ದಿ ಹಿಂದೂ ಅಮೇರಿಕನ್ ಟೆಂಪಲ್ ಆ್ಯಂಡ್ ಕಲ್ಚರಲ್ ಸೆಂಟರ್, ಸನಾತನ ಧರ್ಮ ಫೌಂಡೇಶನ್ ಆಫ್ ಯುನೈಟೆಡ್ ಸ್ಟೇಟ್ಸ್ ಮೊದಲಾದ ಧಾರ್ಮಿಕ ಸಂಸ್ಥೆಗಳ ನೇತಾರರು. ಅಮೇರಿಕ ಮತ್ತು ಕೆನಡ ದೇಶಗಳಲ್ಲಿ ಶೃಂಗೇರಿ ಶಾರದಾಂಬಾ ಮತ್ತು ಆದಿಶಂಕರರ ದೇವಸ್ಥಾನಗಳ ಸಂಸ್ಥಾಪಕರು. 2013ರ ಶರನ್ನವರಾತ್ರಿ ದರ್ಬಾರಿನಲ್ಲಿ ಜಗದ್ಗುರು ಮಹಾಸ್ವಾಮಿಗಳವರ ಅಮೃತಹಸ್ತದಿಂದ 'ಧರ್ಮಾತ್ಮಾ' ಎಂಬ ಬಿರುದನ್ನು ಪಡೆದವರು. 1200ಕ್ಕೂ ಹೆಚ್ಚಿನ ವರ್ಷಗಳ ಶ್ರೀ ಮಠದ ಇತಿಹಾಸದಲ್ಲಿ ಜಗದ್ಗುರುಗಳವರಿಂದ 'ಧರ್ಮಾತ್ಮಾ' ಎಂಬ ಗೌರವದ ಬಿರುದನ್ನು ಪಡೆದ ಮೂವರಲ್ಲಿ ಇವರು ಒಬ್ಬರು ಎಂಬುದು ಮಹತ್ತ್ವದ ಸಂಗತಿ

**ಅಮೇರಿಕದ ಶಂಕರಮಠ**

ಪಶ್ಚಿಮದ ನೆಲದಲ್ಲಿ ಟಿಸಿಲೊಡೆದ ಶೃಂಗೇರಿ ಶ್ರೀ ಶಾರದಾಪೀಠದ ಮೊದಲ ಶಾಖಾ ಮಠವಿರುವುದು ಅಮೇರಿಕದ ಪೆನ್ಸಿಲ್ವೇನಿಯ ರಾಜ್ಯದ ಸ್ಟ್ರೌಡ್ಸಬರ್ಗ್ ಎಂಬಲ್ಲಿ. ಗಿಡಮರಗಳಿಂದ ಆವೃತವಾದ ಪೊಕೋನೋ ಪರ್ವತ ಶ್ರೇಣಿಯ ಸುಮಾರು ಅರವತ್ತೇಳು ಎಕರೆ ಪ್ರದೇಶದ ಹಸಿರುನೆಲದಲ್ಲಿ ಶೃಂಗೇರಿ ವಿದ್ಯಾಭಾರತೀ ಫೌಂಡೇಶನ್ ಸ್ಥಾಪಿಸಿದ ಮೊದಲ ಆಧ್ಯಾತ್ಮ ಕೇಂದ್ರವಿದು. ಶಾರದಾ ಸಾಧನಾ ಕೇಂದ್ರವೆಂದೇ ಪ್ರಸಿದ್ಧವಾದ ಇಲ್ಲಿನ ಶ್ರೀ ಶಾರದಾಂಬಾ ದೇವಸ್ಥಾನವನ್ನು ನೋಡಿದಾಗ ಶೃಂಗೇರಿಯ ಶ್ರೀ ಶಾರದಾಂಬಾದೇವಸ್ಥಾನವನ್ನೇ ನೋಡಿದ ಅನುಭವವಾಗುತ್ತದೆ. ಎತ್ತರದ ರಾಜಗೋಪುರವನ್ನು ಹೊಂದಿದ ಈ ದೇವಸ್ಥಾನ ಶೃಂಗೇರಿ ಶ್ರೀ ಶಾರದಾಂಬಾ ದೇವಸ್ಥಾನದ ಪ್ರತಿಕೃತಿ. 1995 ರ ಜುಲೈ 13 ರಂದು ಶ್ರೀ ಶಾರದಾ, ಶ್ರೀ ಶಂಕರಾಚಾರ್ಯ ಮತ್ತು ಶ್ರೀ ಮಹಾಗಣಪತಿಯ ಪ್ರತಿಷ್ಠೆ ನಡೆಯಿತು. ಪ್ರದಕ್ಷಿಣಪಥದಲ್ಲಿ ಶ್ರೀಚಂದ್ರಮೌಳೀಶ್ವರ, ಸುಬ್ರಹ್ಮಣ್ಯ ಭವಾನೀ, ನವಗ್ರಹ, ಶ್ರೀ ರಾಮ, ಆಂಜನೇಯ ಮೊದಲಾದ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಈ ದೇವಾಲಯದಲ್ಲಿರುವ ಜಗದ್ಗುರು ಶ್ರೀಶ್ರೀಭಾರತೀತೀರ್ಥ ಮಹಾಸ್ವಾಮಿಗಳವರ ಅಮೃತಶಿಲೆಯ ವಿಗ್ರಹ ತುಂಬ ಆಕರ್ಷಕವಾಗಿದೆ. ಶ್ರೀ ಮಠೀಯ ಸದ್ವಿದ್ಯಾಸಂಜೀವಿನೀ ಪಾಠಶಾಲೆಯಲ್ಲಿ ವೇದ-ಸಂಸ್ಕೃತಗಳನ್ನು ಅಧ್ಯಯನ ಮಾಡಿದ ತರುಣ ಅರ್ಚಕರು ಇಲ್ಲಿ ಪೂಜೆ ಮತ್ತಿತರ ಧಾರ್ಮಿಕ ಕ್ರಿಯಾಕಲಾಪಗಳನ್ನು ನಡೆಸುತ್ತಿದ್ದಾರೆ. ಶೃಂಗೇರಿಯ ಸಂಪ್ರದಾಯಕ್ಕೆ ಸ್ವಲ್ಪವೂ ಲೋಪವಿಲ್ಲದಂತೆ ನಡೆಯುವ ಇಲ್ಲಿನ ಪೂಜಾವಿಧಿಯನ್ನು ಭಕ್ತರೆಲ್ಲರೂ ಶ್ರದ್ಧೆಯಿಂದ ವೀಕ್ಷಿಸುತ್ತಾರೆ.

ಬೆಳಗ್ಗೆ 8-30 ರಿಂದ 11.30 ಮತ್ತು ಸಂಜೆ 4-30 ರಿಂದ 8.30ರ ವರೆಗೆ ಈ ದೇವಾಲಯವು ತೆರೆದಿರುತ್ತದೆ. ಸ್ವಚ್ಛತೆ ಮತ್ತು ಶಿಸ್ತಿಗೆ ಆದ್ಯತೆ ನೀಡಲಾಗುತ್ತದೆ. ಶೃಂಗೇರಿಯಲ್ಲಿ ನಡೆಯುವಂತೆ ಶರನ್ನವರಾತ್ರಿ, ಜಗದ್ಗುರುಗಳವರ ವರ್ಧಂತಿ, ಶಂಕರ ಜಯಂತಿ, ಮಹಾಶಿವರಾತ್ರಿ, ಶ್ರೀ ಕೃಷ್ಣಜನ್ಮಾಷ್ಟಮಿ, ರಾಮನವಮಿ-ಮೊದಲಾದ ಎಲ್ಲ ಉತ್ಸವಗಳನ್ನೂ ಆಚರಿಸಲಾಗುತ್ತದೆ.

ಅರ್ಚಕರ ನಿವಾಸ, ಗೋಶಾಲೆ, ಅತಿಥಿಗೃಹ, ಭೋಜನ ಶಾಲೆ, ಪುಸ್ತಕ ಭಂಡಾರ, ಶ್ರೀ ಭಾರತೀ ವಿದ್ಯಾಲಯ-ಇವೆಲ್ಲವೂ ಈ ದೇವಸ್ಥಾನದ ಆವರಣದಲ್ಲಿವೆ. ಶೃಂಗೇರಿಯ ನರಸಿಂಹವನದಂತೆ ಇಲ್ಲಿಯೂ ಆಗಾಗ ಜಿಂಕೆಗಳು ಸಂಚರಿಸುವುದನ್ನು ಕಾಣಬಹುದು. 'ಶಾರದಾ ಯೂತ್ ವಾಲಂಟಿಯರ್ ಗ್ರೂಪ್' ಎಂಬ ಸ್ವಯಂಸೇವಕರ ತಂಡ ರಜಾದಿನಗಳಲ್ಲಿ ಬಂದು ದೇವಾಲಯಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಶ್ರದ್ಧೆಯಿಂದ ಭಾಗವಹಿಸುತ್ತಾರೆ. ಶ್ರೀ ಭಾರತೀ ಲೈಬ್ರೆರಿ ಮತ್ತು ಸಮುದಾಯಭವನದಲ್ಲಿ ಆಗಾಗ ಅದ್ವೈತ ಕುರಿತಾದ ವಿಚಾರಗೋಷ್ಠಿಗಳು, ಶೃಂಗೇರಿ ಶ್ರೀ ಶಾರದಾಪೀಠದ ಕುರಿತು ವಿದೇಶೀಯರಲ್ಲಿ ಹೆಚ್ಚಿನ ಅರಿವು ಮೂಡಿಸುವ ಕಾರ್ಯಕ್ರಮಗಳು ಸಾಧಕರಿಗೆ ಮಾರ್ಗದರ್ಶನ-ಇವೆಲ್ಲ ನಡೆಯುತ್ತಿರುತ್ತವೆ.

ಶೃಂಗೇರಿ ಶ್ರೀ ಶಾರದಾಪೀಠದ ಆಡಳಿತಾಧಿಕಾರಿಗಳೂ, ಇಲ್ಲಿನ ಶೃಂಗೇರಿ ವಿದ್ಯಾಭಾರತೀ ಫೌಂಡೇಶನ್‌ನ ವಿಶ್ವಸ್ಥರೂ ಆದ ಗುರುಸೇವಾಧುರೀಣ, ಪದ್ಮಶ್ರೀ ಡಾ ವಿ.ಆರ್. ಗೌರೀಶಂಕರರವರ ನೇತೃತ್ವದಲ್ಲಿ ಶೃಂಗೇರಿ ಶ್ರೀ ಮಠದ ಋತ್ವಿಜರ ತಂಡ ಇಲ್ಲಿಗೆ ಬಂದು ಅತಿರುದ್ರ ಮತ್ತು ಸಹಸ್ರ ಚಂಡೀಮಹಾಯಾಗವನ್ನು ಶಾಸ್ತ್ರೋಕ್ತವಾಗಿ ನಡೆಸಿರುವುದು ಒಂದು ಐತಿಹಾಸಿಕ ಘಟನೆ. 1995 ರಿಂದ ಪ್ರತಿವರ್ಷವೂ ಇಲ್ಲಿ ಅಮೇರಿಕದಾದ್ಯಂತ ವ್ಯಾಪಿಸಿರುವ ವೇದವಿದರ ಸಹಭಾಗಿತ್ವದೊಂದಿಗೆ ಮಹಾರುದ್ರ ಪುರಶ್ಚರಣೆ ನಡೆಯುತ್ತದೆ. 2012ರಲ್ಲಿ ಇಲ್ಲಿ ನಡೆದ ವೇದ ಸಮ್ಮೇಳನ ಮತ್ತೊಂದು ಪ್ರಮುಖ ಕಾರ್ಯಕ್ರಮ. ಶ್ರೀ ಭಾರತೀ ವಿದ್ಯಾಲಯದಲ್ಲಿ ವಿದೇಶದಲ್ಲಿ ಬೆಳೆಯುತ್ತಿರುವ ಭಾರತೀಯ ಮಕ್ಕಳಿಗೆ ಸ್ವದೇಶದ ಬೇರನ್ನು ಗಟ್ಟಿಗೊಳಿಸುವ ಮಾತೃಭಾಷೆ, ರಾಷ್ಟ್ರಭಾಷೆ ಮತ್ತು ಸಾಂಸ್ಕೃತಿಕ ಭಾಷೆಯಾದ ಸಂಸ್ಕೃತದ ಬೋಧನೆ, ಸಂಗೀತ-ಭರತನಾಟ್ಯಗಳ ಕಲಿಕೆ, ರಾಮಯಾಣ-ಮಹಾಭಾರತ-ಭಗವದ್ಗೀತೆಗಳ ಕುರಿತು ಪಾಠ-ಪ್ರವಚನ-ಇತ್ಯಾದಿಗಳು ನಡೆಯುತ್ತವೆ. ಇಲ್ಲಿ ಆಗಾಗ ನಡೆಯುವ ಧಾರ್ಮಿಕ ಪ್ರವಚನ, ಸಂಗೀತ ಕಛೇರಿ, ನಾಯಕತ್ವ ತರಬೇತಿ, ಭಜನೆ, ಸೌಂದರ್ಯ ಲಹರಿ ಮತ್ತು ಲಲಿತಾ ಸಹಸ್ರನಾಮ ಪಾರಾಯಣ-ಇತ್ಯಾದಿಗಳಲ್ಲಿ ಆಸಕ್ತರೆಲ್ಲ ಶ್ರದ್ಧೆಯಿಂದ ಭಾಗವಹಿಸುತ್ತಾರೆ.

**ಕೆನಡದ ಟೊರೆಂಟೋದಲ್ಲಿ**

ಜಗದ್ಗುರು ಮಹಾಸ್ವಾಮಿಗಳವರ ಆಶೀರ್ವಚನ ಪಡೆದು ಶೃಂಗೇರಿ ವಿದ್ಯಾಭಾರತೀ ಫೌಂಡೇಶನ್ 2010ರ ಜೂನ್ 20ರಂದು ಕೆನಡಾ ದೇಶದ ಟೊರೆಂಟೋದಲ್ಲಿ ಶಂಕರ ಮಠವೊಂದನ್ನು ಸ್ಥಾಪಿಸಿತು. ಬಹಳ ವರ್ಷಗಳಿಂದ ಶೃಂಗೇರಿಮಠದ ವಿನೀತ ಶಿಷ್ಯರೂ, ಪ್ರಸಿದ್ಧ ಉದ್ಯಮಿಗಳೂ ಆದ ರವಿಸುಬ್ರಹ್ಮಣ್ಯನ್ ಅವರ ನಿರಂತರ ಪ್ರಯತ್ನ ಇದಕ್ಕೆ ಮೂಲಕಾರಣ. ಇಲ್ಲಿನ ಶ್ರೀಶಾರದಾಂಬಾ ದೇವಸ್ಥಾನವು ಸ್ಟ್ರೌಡ್ಸ್‌ಬರ್ಗ್ ದೇವಸ್ಥಾನದಂತೆಯೇ ಆಕರ್ಷಕ ರಾಜಗೋಪುರವನ್ನು ಹೊಂದಿದ್ದು, ತುಂಬ ಸುಂದರವಾಗಿ ಕಂಗೊಳಿಸುತ್ತಿದೆ. ಶೃಂಗೇರಿಯಿಂದ ವೇದಾಧ್ಯಯನ ಸಂಪನ್ನರಾದ ಋತ್ವಿಜರು ಬಂದು ಶಾಸ್ತ್ರೋಕ್ತವಾಗಿ ಶಾರದಾದೇವಿ, ಆದಿಶಂಕರ, ಗಣಪತಿ ಮತ್ತು ಶಿವ, ವಿಷ್ಣು, ದೇವೀ, ಆಂಜನೇಯ, ಕಾರ್ತಿಕೇಯ ಹಾಗೂ ನವಗ್ರಹ ವಿಗ್ರಹಗಳನ್ನು ಪ್ರತಿಷ್ಠಾಪಿಸಿ, ಕುಂಭಾಭಿಷೇಕವನ್ನು ನೆರವೇರಿಸಿದರು. ಶೃಂಗೇರಿಯ ಪದ್ಧತಿಯಂತೆಯೇ ನಿತ್ಯಪೂಜಾದಿ ಕಾರ್ಯಗಳು ನಡೆಯುತ್ತವೆ.

ದೇವಾಲಯದ ಆವರಣದಲ್ಲಿರುವ ತುಂಗಭದ್ರಾ ಸಭಾಭವನ ತುಂಬ ವಿಶಾಲವಾದುದು. ಈ ಸಭಾಭವನದಲ್ಲಿ ಆಗಾಗ ಹೋಮ-ಹವನಗಳು, ಉಪನಯನ-ವಿವಾಹಾದಿಗಳು ಧಾರ್ಮಿಕ ಪ್ರವಚನ, ಸಂಗೀತೋತ್ಸವ, ನಾಯಕತ್ವ ತರಬೇತಿ ಶಿಬಿರ-ಇತ್ಯಾದಿ ಕಾರ್ಯಕ್ರಮಗಳು ನಡೆಯುತ್ತವೆ. ಶಂಕರ ಭಗವತ್ಪಾದರ ಜೀವನ ಮತ್ತು ಸಾಧನೆಗಳನ್ನು ಆಕರ್ಷಕವಾಗಿ ಪ್ರತಿಬಿಂಬಿಸುವ ಆದಿಶಂಕರ ಮ್ಯೂಸಿಯಂ ಇಲ್ಲಿದೆ. 1910 ರ ಸೆಪ್ಟೆಂಬರ್ 10 ರಂದು ಭಾರತದ ಅಂದಿನ ರಾಷ್ಟ್ರಪತಿಗಳಾದ ಅಬ್ದುಲ್ ಕಲಾಂ ಅವರು ಉದ್ಘಾಟಿಸಿದ ಆದಿಶಂಕರ ಗ್ರಂಥಾಲಯದಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಧಾರ್ಮಿಕ ಮತ್ತು ಸಾಂಸ್ಕೃತಿಕ ಗ್ರಂಥಗಳಿವೆ. ತರುಣಪೀಳಿಗೆಗೆ ಮತ್ತು ಆಸಕ್ತರಿಗೆ ಭಜನೆ, ಯೋಗ, ಸಂಗೀತ, ಸಂಸ್ಕೃತಿ, ಭಗವದ್ಗೀತೆ-ಇತ್ಯಾದಿ ಕಲಿಸಲು ಆದಿಶಂಕರ ವಿದ್ಯಾಲಯವನ್ನು ಸ್ಥಾಪಿಸಲಾಗಿದೆ.

ಪದ್ಮಶ್ರೀ ಡಾ.ವಿ.ಆರ್. ಗೌರೀಶಂಕರ್, ಇಸ್ರೋ ಸಂಸ್ಥೆಯ ಅಧ್ಯಕ್ಷ ಡಾ ರಾಧಾಕೃಷ್ಣನ್, ಎಸ್.ವಿ.ಬಿ.ಎಫ್.ಅಧ್ಯಕ್ಷ ಧರ್ಮಾತ್ಮಾ ಡಾ ಯಜ್ಞಸುಬ್ರಹ್ಮಣ್ಯನ್ ಮತ್ತು ಕೆನಡ ದೇಶದ ಬಹಳ ಮಂದಿ ಅಧಿಕಾರಿಗಳು, ಅನೇಕ ಸಂಘ-ಸಂಸ್ಥೆಗಳ ಮುಖ್ಯಸ್ಥರೂ ಇಲ್ಲಿಗೆ ಭೇಟಿ ನೀಡಿದ್ದಾರೆ. ಶೃಂಗೇರಿ ಶ್ರೀ ಶಾರದಾ ಪೀಠದ ಆಸ್ಥಾನ ಸಂಗೀತ ವಿದ್ವಾನ್ ಹಾಗೂ ಸ್ಯಾಕ್ಸೊಫೋನ್ ಕಲಾವಿದ ಕದ್ರಿ ಗೋಪಾಲನಾಥ್, ಪ್ರಸಿದ್ಧ ಹಾಡುಗಾರ ಜೇಸುದಾಸ್ ಮೊದಲಾದ ಪ್ರಸಿದ್ಧ ಕಲಾವಿದರು ಇಲ್ಲಿ ಕಾರ್ಯಕ್ರಮ ನೀಡಿದ್ದಾರೆ.

**ನಾಲ್ಕು ದಿಕ್ಕಿನಲ್ಲಿ ನಾಲ್ಕು ಮಠಗಳು.**

ಆದಿಶಂಕರರು ಸನಾತನ ಧರ್ಮದ ಸಂರಕ್ಷಣೆ ಮತ್ತು ಪ್ರಸಾರಕ್ಕಾಗಿ ಭಾರತದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಆಮ್ನಾಯ ಪೀಠಗಳನ್ನು ಸ್ಥಾಪಿಸಿದರು. ಇದೀಗ ಅವರಿಂದ ಆರಂಭಗೊಂಡ ಶೃಂಗೇರಿ ಶ್ರೀ ಶಾರದಾಪೀಠದ ಅವಿಚ್ಛಿನ್ನ ಗುರುಪರಂಪರೆಯಲ್ಲಿ ಮೂವತ್ತಾರನೆಯವರಾದ ಜಗದ್ಗುರು ಶ್ರೀಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಅನುಗ್ರಹ, ಆಶೀರ್ವಾದ ಮತ್ತು ಮಾರ್ಗದರ್ಶನದಲ್ಲಿ ಅಮೇರಿಕ ದೇಶದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಶಂಕರಮಠಗಳನ್ನು ಸ್ಥಾಪಿಸಲಾಗುತ್ತಿದೆ. ಪೂರ್ವದಿಕ್ಕಿನ ಸ್ಟ್ರೌಡ್ಸಬರ್ಗ್ ಶಂಕರಮಠ ಈಗಾಗಲೇ ಕಾರ್ಯನಿರತವಾಗಿದೆ. ದಕ್ಷಿಣದಲ್ಲಿ ಹ್ಯೂಸ್ಟನ್ ಕೇಂದ್ರಕ್ಕೆ ಶ್ರೀಮಠದ ಆಡಳಿತಾಧಿಕಾರಿ ಪದ್ಮಶ್ರೀ ವಿ.ಆರ್. ಗೌರೀಶಂಕರರವರು 2013ರಲ್ಲಿ ಶಿಲಾನ್ಯಾಸ ಮಾಡಿದ್ದು, ಈ ವರ್ಷದ ಅಂತ್ಯದ ಒಳಗೆ ಅದು ಉದ್ಘಾಟನೆಗೊಳ್ಳುವ ನಿರೀಕ್ಷೆ ಇದೆ. ಉತ್ತರದ ಡೆಟ್ರಾಯಿಟ್ ಮತ್ತು ಪಶ್ಚಿಮದ ಕ್ಯಾಲಿಫೋರ್ನಿಯಾದ ಸ್ಯಾಂಡಿಗೋ ಎಂಬಲ್ಲಿ ಇನ್ನೆರಡು ಮಠಗಳನ್ನು ಸ್ಥಾಪಿಸಲು ಎಸ್.ವಿ.ಬಿ.ಎಫ್‌ನವರು ಈಗಾಗಲೇ ಸ್ಥಳವನ್ನು ಖರೀದಿಸಿದ್ದು, ಸದ್ಯದಲ್ಲೇ ಧರ್ಮಪೀಠಗಳ ಸ್ಥಾಪನೆಯಾಗಲಿದೆ. ಅಲ್ಲಿಗೆ ಪಶ್ಚಿಮದ ನೆಲದಲ್ಲಿ ಶೃಂಗೇರಿ ಶ್ರೀಶಾರದಾಪೀಠವು ನಾಲ್ಕು ಟಿಸಿಲೊಡೆದಂತಾಗಿ, ಸನಾತನ ಧರ್ಮದ ಸಂರಕ್ಷಣೆ ಮತ್ತು ಪ್ರಸಾರಕಾರ್ಯ ನಿರಂತರವಾಗಿ ನಡೆಯಲಿದೆ.

ಅಮೇರಿಕದ ಬಾಸ್ಟನ್‌ನಲ್ಲಿರುವ ದಿ ಫಿಲಾಸಫಿ ಫೌಂಡೇಶನ್ ಶೃಂಗೇರಿ ಜಗದ್ಗುರು ಮಹಾಸಂಸ್ಥಾನದೊಂದಿಗೆ ನಿಕಟವಾದ ಸಂಪರ್ಕವನ್ನು ಹೊಂದಿದೆ. 2001ರಲ್ಲಿ ನ್ಯೂಯಾರ್ಕ್‌ನಲ್ಲಿ ನಡೆದ ಧಾರ್ಮಿಕ ಮತ್ತು ಆಧ್ಯಾತ್ಮಿಕ ಶೃಂಗ ಸಮ್ಮೇಳದಲ್ಲಿ ಶ್ರೀಮಠದ ಪರವಾಗಿ ಪದ್ಮಶ್ರೀ ಡಾ ಗೌರೀಶಂಕರ್ ಅವರು ನೀಡಿದ ಬೋಧಪ್ರದವಾದ ಅತ್ಯುತ್ತಮ ಧಾರ್ಮಿಕ ಉಪನ್ಯಾಸ ಪಾಶ್ಚಾತ್ತ್ಯ ದೇಶಗಳಲ್ಲಿ ಸನಾತನ ಧರ್ಮದ ಕುರಿತು ಹೊಸ ಅರಿವು ಮೂಡಿಸಿದೆ.

ಹೀಗೆ ಶೃಂಗೇರಿ ಶ್ರೀ ಶಾರದಾಪೀಠ ನಿಜವಾದ ಅರ್ಥದಲ್ಲಿ ಜಗದ್ಗುರು ಮಹಾಸಂಸ್ಥಾನ ಕೇವಲ ಅಮೇರಿಕ, ಕೆನಡ ದೇಶಗಳು ಮಾತ್ರವಲ್ಲ, ರೋಮ್-ಇಟಲಿ ಮೊದಲಾದ ದೇಶಗಳಲ್ಲಿ ಇರುವ ದಿ ಹರ್ಮಿಟೇಜ್ ಹೆಸರಿನ ಅದ್ವೈತಾಶ್ರಮಗಳು ಹಾಗೂ ಜಗತ್ತಿನಾದ್ಯಂತದ ಅನೇಕ ಮಂದಿ ತತ್ವ ಚಿಂತಕರು ಮತ್ತು ದಾರ್ಶನಿಕರು ಜಗದ್ಗುರು ಮಹಾಸ್ವಾಮಿಗಳವರ ಮಾರ್ಗದರ್ಶನ ಪಡೆಯುತ್ತಿದ್ದಾರೆ.

# ಡಾ। ಮನಾಲಿ ಪವನ್‌ರಾವ್‌ರವರ ಗುರುವಂದನಾ ಕಾರ್ಯಕ್ರಮ

ಮುಂಬಯಿ ನಿವಾಸಿ ನಾಟ್ಯ ವಿದುಷಿ ಡಾ। ಮನಾಲಿ ಪವನ್‌ರಾವ್‌ರವರ ಗುರುವಂದನಾ ಕಾರ್ಯಕ್ರಮವು ಮಾತುಂಗಾ ಪಶ್ಚಿಮದ ಕರ್ನಾಟಕ ಸಂಘದ ವಿಶ್ವೇಶ್ವರಯ್ಯ ಸಭಾಗೃಹದಲ್ಲಿ ಡಿಸೆಂಬರ್ 20, 2015ರಂದು ನಡೆಯಿತು. ಇವರು ಮಂಗಳೂರಿನ ಕಿರಣ್‌ರಾವ್ ಹಾಗೂ ಜ್ಞಾನೇಶ್ವರಿ ದಂಪತಿಗಳ ಪುತ್ರಿ. ಮುಂಬಯಿಯ ಶ್ರೀ ಪವನ್‌ಕುಮಾರ್‌ರವರ ಪತ್ನಿ, ವೃತ್ತಿಯಲ್ಲಿ ವೈದ್ಯೆ. ಆದರೂ ಸಾಹಿತ್ಯ ಹಾಗೂ ಸಂಗೀತದಲ್ಲಿ ಸಾಧನೆ ಮಾಡಿ ವೃತ್ತಿಯೊಂದಿಗೆ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದಾರೆ. ಈ ಗುರುವಂದನಾ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಜಿ.ಎನ್. ಉಪಾಧ್ಯ ಹಾಗೂ ಕನ್ನಡ ಸಾಹಿತ್ಯ ಪರಿಷತ್, ದಕ್ಷಿಣಕನ್ನಡ ಜಿಲ್ಲೆಯ ನಿಕಟಪೂರ್ವ ಅಧ್ಯಕ್ಷ ಪ್ರದೀಪ್ ಕುಮಾರ್ ಕಲ್ಕೂರ್ ಆಗಮಿಸಿದ್ದರು. ಹಾಗೆಯೇ ಅವರ ಗುರುಗಳಾದ ಹಾಗೂ ಅತ್ತೆ ಮಾವಂದಿರೂ ಆದ ನೃತ್ಯ ವಿದ್ಯಾಲಯ ಮುಂಬಯಿಯ ಶ್ರೀಮತಿ ಶೈಲಜಾ ಮತ್ತು ಶ್ರೀ ಮಧುಸೂಧನ್ ಹಾಗೂ ಮಂಗಳೂರಿನ ಗುರು ವಿದ್ವಾನ್ ಯು.ಕೆ.ಪ್ರವೀಣ್ ದಂಪತಿಗಳು ಉಪಸ್ಥಿತರಿದ್ದರು. ಡಾ। ಮನಾಲಿಯವರು ಕಾರ್ಯಕ್ರಮವನ್ನು ಪುಷ್ಪಾಂಜಲಿ ಮತ್ತು ಗಣೇಶ ಕೌತುವಂದಿಂದ ಆರಂಭಿಸಿ ಜತಿಸ್ವರ ಮತ್ತು ವರ್ಣದಿಂದ ಮುಂದುವರೆಸಿದರು. ನಟುವಾಂಗದಲ್ಲಿ ವಿದ್ವಾನ್ ಯು.ಕೆ.ಪ್ರವೀಣ್, ಗುರು ಶೈಲಜಾ ಮಧುಸೂದನ್, ಹಾಡುಗಾರಿಕೆಯಲ್ಲಿ ಪವನ್ ಮಧುಸೂಧನ್, ಮೃದಂಗದಲ್ಲಿ ಶ್ರೀನಾಥ್ ಸೋಮಯಾಜಿ, ವಯೋಲಿನ್‌ನಲ್ಲಿ ಶಾಂತಾ ಬಾಲಸುಬ್ರಹ್ಮಣ್ಯಂ, ರಾಘವೇಂದ್ರ ಬಾಳಿಗಾರವರು ಕೊಳಲು ವಾದನದಲ್ಲಿ ಸಹಕರಿಸಿದರು. ಡಾ। ಮನಾಲಿ ಪವನ್ ರಾವ್ ತನ್ನ ಗುರು ವಿದ್ವಾನ್ ಯು.ಕೆ.ಪ್ರವೀಣ್ ಮತ್ತು ಶೈಲಜಾ ಮಧುಸೂಧನ್‌ರವರನ್ನು, ಅತಿಥಿಗಳನ್ನು ಹಾಗೂ ವಾದ್ಯವೃಂದದವರನ್ನು ಸನ್ಮಾನಿಸಿದರು. ನಾಟ್ಯವಿದುಷಿ ರಕ್ಷಾ ಮಧುಸೂಧನ ರಾವ್ ಕಾರ್ಯಕ್ರಮ ನಿರೂಪಿಸಿದರು. ಡಾ। ಮನಾಲಿ ವಂದಿಸಿದರು.







■...4ನೇ ಪುಟದಿಂದ

## ನೃತ್ಯ ಕಲಾವಿದ ಶ್ರೀ ಆರ್. ಮೋಹನ್ ರಾವ್

ಸಂದರ್ಶನ ನಡೆಸಿ ಪ್ರಸಾರ ಮಾಡಿದೆ. ಮೋಹನ ರಾಯರ ಶಿಷ್ಯೆ ಲಕ್ಷ್ಮೀ ಗುರುರಾಜ ತಮ್ಮ ನೃತ್ಯ ನಿಕೇತನ ಕೊಡವೂರು ನೃತ್ಯ ಸಂಸ್ಥೆಯ ರಜತ ಮಹೋತ್ಸವ ಸಂದರ್ಭದಲ್ಲಿ ರಾಜಾಂಗಣದಲ್ಲಿ ಶ್ರೀ ಮೋಹನರಾವ್ ದಂಪತಿಯನ್ನು ಸನ್ಮಾನಿಸಿ ತಮ್ಮ ಗುರುಭಕ್ತಿಯನ್ನು ಮೆರೆದಿದ್ದಾರೆ. ಮಾತ್ರವಲ್ಲ ಹಲವು ಸಂಘ ಸಂಸ್ಥೆಗಳು ಇವರನ್ನು 'ನೃತ್ಯವಿದ್ಯಾನಿಧಿ', 'ನಾಟ್ಯ ವಿಶಾರದ', 'ನಾಟ್ಯಾಚಾರ್ಯ' ಮುಂತಾದ ಬಿರುದುಗಳನ್ನು ನೀಡಿ ಸನ್ಮಾನಿಸಿವೆ.

ಇವರ ಮಗ ರವೀಂದ್ರ ರಾವ್ (ಎಂಜಿನಿಯರ್), ಸೊಸೆ ಡಾ.ಪ್ರೇಮಲತಾ ರಾವ್, ಮೊಮ್ಮಗ ಪ್ರಜ್ವಲ್‌ರಾವ್‌ರೊಂದಿಗೆ ವೃತ್ತಿ ಸಂಬಂಧವಾಗಿ ಅಬುದಾಭಿಯಲ್ಲಿ ನೆಲೆಸಿದ್ದಾರೆ. ತಂದೆಯಿಂದ ಕಲಾ ಬಳುವಳಿಯನ್ನು ಪಡೆದ ಮಗಳು ರಮ್ಯಾ ರಾವ್ (ಸಂಗೀತ ಭರತನಾಟ್ಯ ಕಲಾವಿದೆ) ತನ್ನ ಪತಿ ರಾಜರಾಮ ಗಜಂತೋಡಿ ಅವರೊಂದಿಗೆ ಬೆಳ್ತಂಗಡಿ ತಾಲೂಕು ಕುತ್ಯಾಳದ ಸುಧಾನಿಲಯದಲ್ಲಿ ಮಕ್ಕಳಾದ ಪ್ರತ್ಯೂಷ್ ಜೊತೆ ನೆಲೆಸಿದ್ದಾರೆ. ಶ್ರೀಯುತ ಮೋಹನರಾಯರು ತಮ್ಮ ವಿಶ್ರಾಂತ ಜೀವನವನ್ನು ಪತ್ನಿ ಶ್ರೀಮತಿ ಲಲಿತಾರಾವ್ (ನಿವೃತ್ತ ಶಿಕ್ಷಕಿ) ಜೊತೆ ಬೆಳ್ತಂಗಡಿ ತಾಲೂಕು ಗುರುವಾಯನಕೆರೆಯ ಶಕ್ತಿನಗರದ ತಮ್ಮ ಮನೆ 'ಓಂಕಾರ'ದಲ್ಲಿ ನಡೆಸುತ್ತಿದ್ದಾರೆ. ಇವರಿಗೂ ಇವರ ಕುಟುಂಬಕ್ಕೂ ಭಗವಂತ ಸಕಲ ಸೌಭಾಗ್ಯ ಸಂಪತ್ತನ್ನು ನೀಡಿ ಅನುಗ್ರಹಿಸಲಿ ಎಂದು ಹಾರೈಸೋಣ.

-ಜಯಶ್ರೀ ಶ್ರೀಕೃಷ್ಣಯ್ಯ ಅನಂತಪುರ.

## ಮಂಜುನಾಥ ಹೆಬ್ಬಾರರ ನಿವಾಸಕ್ಕೆ ಪರ್ಯಾಯ ಶ್ರೀ ಶ್ರೀಗಳ ಭೇಟಿ

ನಮ್ಮ ಸಂಘದ ಸಕ್ರಿಯ ಕಾರ್ಯಕರ್ತ ಹಾಗೂ ನಿಕಟಪೂರ್ವ ಜತೆ ಕಾರ್ಯದರ್ಶಿಯಾದ ಶ್ರೀ ಮಂಜುನಾಥ ಹೆಬ್ಬಾರರ ನಿವಾಸಕ್ಕೆ ಪೇಜಾವರ ಮಠದ ಹಿರಿಯ ಹಾಗೂ ಕಿರಿಯ ಶ್ರೀ ಶ್ರೀಗಳು ತಾ.05-01-2016ರಂದು ಭೇಟಿಯಿತ್ತು ಪಾದಪೂಜೆ ಸ್ವೀಕರಿಸಿ, ಫಲಮಂತ್ರಾಕ್ಷತೆಯಿತ್ತು ಆಶೀರ್ವದಿಸಿದರು. ಶ್ರೀ ಜಿ.ಕೆ.ಕೋಲ್ಪೆ, ಶ್ರೀ ಗಣೇಶ್ ಹೆಬ್ಬಾರ್ ಹಾಗೂ ಕುಟುಂಬದವರು ಉಪಸ್ಥಿತರಿದ್ದು ಶ್ರೀ ಶ್ರೀಗಳನ್ನು ಸ್ವಾಗತಿಸಿದರು.

(ಫೋಟೋ ಕೊನೆಯ ಪುಟದಲ್ಲಿ)

## ಶ್ರೀಶಾರದಾ ತುರ್ತು ಸೇವಾ ಸಮಿತಿ

**ಉಡುಪಿಯ ಸಮಾಜ ಬಾಂಧವರಿಗೆ ಯಾವುದೇ ರೀತಿಯ ತುರ್ತು ಸಹಾಯ ಅಗತ್ಯ ಬಿದ್ದಲ್ಲಿ ತುರ್ತು ಸೇವಾ ಸಮಿತಿಯನ್ನು ರಚಿಸಿಲಾಗಿದೆ. ಸಮಿತಿಯ ಸದಸ್ಯರ ದೂರವಾಣಿ ಸಂಖ್ಯೆ ಈ ಕೆಳಗೆ ಕೊಡಲಾಗಿದೆ ಅಗತ್ಯವಿದ್ದಾಗ ಸಮಾಜ ಬಾಂಧವರು ಇದರ ಸದುಪಯೋಗ ಮಾಡಿಕೊಳ್ಳಬಹುದು.**

| | | | |
|---|---|---|---|
| 1. | ಕರಂಬಳ್ಳಿ ವಸಂತ ರಾವ್ | - | 9632291183 |
| 2. | ಉಂಡಾರು ಕೃಷ್ಣಾನಂದ ರಾವ್ | - | 9164581333 |
| 3. | ನಂದಳಿಕೆ ಪ್ರವೀಣ ಕುಮಾರ್ ರಾವ್ | - | 9343572490 |
| 4. | ನಂದಳಿಕೆ ಉಮೇಶ್ ರಾವ್ | - | 8970504176 |
| 5. | ಹೆರ್ಗ ನಿರಂಜನ ರಾವ್ | - | 9902196175 |
| 6. | ಕೆರೆಬೆಟ್ಟು ಲಕ್ಷ್ಮೀನಾರಾಣ ಹೆಬ್ಬಾರ | - | 9448252736 |
| 7. | ಮಹೇಶ್ | - | 7259914498 |
| 8. | ಟಿ.ಜಗದೀಶ ರಾವ್ | - | 9686123905 |
| 9. | ಪುತ್ತಿಗೆ ಸುಬ್ರಹ್ಮಣ್ಯ ರಾವ್ | - | 9945379479 |
| 10. | ಅಜಿತ್ ರಾವ್ ಬೈಲೂರು | - | 9448108920 |
| 11. | ಆದ್ಯಪಾಡಿ ಮೋಹನದೇವ್ | - | 0820-2535328 |
| 12. | ವೈ. ಭುವನೇಂದ್ರ ರಾವ್ | - | 9448428330 |
| 13. | ಡಾ। ವೈ. ಸುದರ್ಶನ್ ರಾವ್ | - | 9845136322 |
| 14. | ಕುತ್ಪಾಡಿ ಸುರೇಶ್ ರಾವ್ | - | 9483242111 |
| 15. | ವೈ. ಪ್ರಕಾಶ್ ಕುಮಾರ್ | - | 9448445617 |
| 16. | ವೈ. ಪ್ರಸಾದ್ ಕುಮಾರ್ | - | 9036252105 |
| 17. | ಪರೀಕ ಚಂದ್ರಶೇಖರ ರಾವ್ | - | 9591893091 |
| 18. | ಬಿ. ಜಯರಾಮ ರಾವ್ | - | 9844545040 |
| 19. | ಎಮ್.ಪಾಲಚಂದ್ರ ರಾವ್ | - | 0820-2521366 |
| 20. | ಕೆ. ವೆಂಕಟ್ ರಾವ್ | - | 9480016125 |
| 21. | ಎಸ್.ಎಮ್.ರಾವ್ | - | 9449914040 |
| 22. | ಐ.ಕೆ.ಜಯಚಂದ್ರ ರಾವ್ | - | 9448331683 |

With Best Complimemts From

SRI M. SHAILESH RAO Ph : 9448624324
B.E., Civil


Civil Engineer & Contractor
SRI MALAVIKA ASSOCIATES
KALSANKA-UDUPI ROAD, UDUPI.
Website : shreemaalavikaassociates.com

## ಪಾಕೇಟ್ ಕ್ಯಾಲೆಂಡರ್ 2016

| | | | | | ಜನವರಿ-31 ಏಪ್ರಿಲ್-30 ಜುಲೈ-31 | ಅಕ್ಟೋಬರ್-31 | ಮೇ-31 | ಫೆಬ್ರವರಿ-29 ಆಗಸ್ಟ್-31 | ಮಾರ್ಚ್-31 ನವೆಂಬರ್-30 | ಜೂನ್-30 | ಸೆಪ್ಟೆಂಬರ್-30 ಡಿಸೆಂಬರ್-31 |
|---|---|---|---|---|---|---|---|---|---|---|---|
| 1 | 8 | 15 | 22 | 29 | ಶುಕ್ರ | ಶನಿ | ಆದಿತ್ಯ | ಸೋಮ | ಮಂಗಳ | ಬುಧ | ಗುರು |
| 2 | 9 | 16 | 23 | 30 | ಶನಿ | ಆದಿತ್ಯ | ಸೋಮ | ಮಂಗಳ | ಬುಧ | ಗುರು | ಶುಕ್ರ |
| 3 | 10 | 17 | 24 | 31 | ಆದಿತ್ಯ | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
| 4 | 11 | 18 | 25 | ★ | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ | ಆದಿತ್ಯ |
| 5 | 12 | 19 | 26 | ★ | ಮಂಗಳ | ಬುಧ | ಗುರು | ಶುಕ್ರ | ಶನಿ | ಆದಿತ್ಯ | ಸೋಮ |
| 6 | 13 | 20 | 27 | ★ | ಬುಧ | ಗುರು | ಶುಕ್ರ | ಶನಿ | ಆದಿತ್ಯ | ಸೋಮ | ಮಂಗಳ |
| 7 | 14 | 21 | 28 | ★ | ಗುರು | ಶುಕ್ರ | ಶನಿ | ಆದಿತ್ಯ | ಸೋಮ | ಮಂಗಳ | ಬುಧ |


01-01-2017 : ಆದಿತ್ಯವಾರ

ರಚನೆ : ಮ.ಮ. ಹೆಬ್ಬಾರ್, ಬೇಳಂಜೆ

ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521

ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

ಶುಭಾಶಯಗಳೊಂದಿಗೆ
ಹೆಬ್ಬಾರ್ ಎಂಟರ್‌ಪ್ರೈಸಸ್
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಸಂಪರ್ಕ ಸಂಖ್ಯೆ 9611099894

## 'ಹೆಜ್ಜೆ ಗುರುತು' ಕೆ.ಗೋಪಾಲರಾವ್ ಕಡಬ ಇವರ ಆತ್ಮಕಥನ




ನಮ್ಮ ಸಮಾಜದ ಹಿರಿಯ ಶಿಕ್ಷಕ, ನೇತಾರ, ಧಾರ್ಮಿಕ ಮುಂದಾಳು, ಸೇವಾಧುರೀಣರಾದ ಕಡಬ ಗೋಪಾಲರಾಯರನ್ನು ಅಭಿನಂದಿಸಿ ಅವರ ಆತ್ಮಕಥನ ಹಾಗೂ ಅಭಿನಂದನಾ ಲೇಖನಗಳನ್ನೊಡಗೂಡಿದ ಹೊತ್ತಗೆ 'ಹೆಜ್ಜೆಗುರುತು' ಪುಸ್ತಕವನ್ನು ಅವರ ಪುತ್ರ ಕೆ. ಶರತ್ ಕುಮಾರ್ ಬಿಳಿನೆಲೆಯವರು ನವರಸ ಸಾಹಿತ್ಯಮಾಲೆ, ಕಡಬ ಪ್ರಕಾಶನದಡಿಯಲ್ಲಿ ಪ್ರಕಟಿಸಿದ್ದಾರೆ.

ಪ್ರಸಿದ್ಧ ಕುಂಭಾಟ್ ಮನೆತನಕ್ಕೆ ಸೇರಿದ ಶ್ರೀ ಕೆ. ಈಶ್ವರಯ್ಯ ಹಾಗೂ ಶ್ರೀಮತಿ ಮಹಾಲಕ್ಷ್ಮಿ ದಂಪತಿಗಳ ಪುತ್ರನಾದ ಶ್ರೀ ಕೆ.ಗೋಪಾಲರಾವ್ ಕಡಬ ಇವರು ಜನಿಸಿದ್ದು ತಾ.09-02-1939ರಂದು. ಇವರ ಅಜ್ಜ ದಿ. ಕುಂಭಾಟ್ ಕೃಷ್ಣಯ್ಯನವರು ಕಡಬದ ಅಭಿವೃದ್ಧಿಯಲ್ಲಿ ಪ್ರಧಾನ ಪಾತ್ರ ವಹಿಸಿದ್ದವರು. ಪ್ರಾಥಮಿಕ ಹಾಗೂ ಹೈಸ್ಕೂಲು ವಿದ್ಯಾಭ್ಯಾಸದ ನಂತರ 'ಶಕ್ತಿ' ಎಂಬ ಪತ್ರಿಕೆಯಲ್ಲಿ ಉಪಸಂಪಾದಕರಾಗಿ ಕೆಲಸ ಮಾಡಿದ ನಂತರ ಸುಂಕದಕಟ್ಟೆ ಐತ್ತೂರು ಶಾಲೆಯಲ್ಲಿ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ ಕೆಲಸಕ್ಕೆ ಸೇರಿದರು. ಮುಂದೆ ಬಿಳಿನೆಲೆಯ ಶಾಲೆಯಲ್ಲಿ 28 ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಶಾಲೆಯ ಅಭಿವೃದ್ಧಿಗೆ ಕಾರಣೀಭೂತರಾಗಿದ್ದು ಮಾತ್ರವಲ್ಲ ಹೈಸ್ಕೂಲು ಸ್ಥಾಪನೆಗೆ, ಪತ್ತಿರದ ಪುತ್ತಿಲ ಬೈಲಕ್ಕದಲ್ಲಿ ಹೊಸ ಶಾಲೆಗಳ ಸ್ಥಾಪನೆಗೆ, ಹಿಂದಿ ಪರೀಕ್ಷೆ ಕೇಂದ್ರ ಸ್ಥಾಪನೆಗೆ, ಊರಿನಲ್ಲಿ ಸೇತುವೆಯ ಹಾಗೂ ರಸ್ತೆಯ ಸ್ಥಾಪನೆಗೆ ದುಡಿದರು. ದೇವಲೋಕದಲ್ಲಿ ಚುನಾವಣೆ, ಸುಪ್ರಭಾತ, ಭಕ್ತಾಂಜಲಿ, ಬಾಲಗೋಪಾಲ ವಚನಗಳು ಹೀಗೆ ಒಟ್ಟು 17 ಪುಸ್ತಕಗಳನ್ನು ತಮ್ಮ ನವರಸ ಸಾಹಿತ್ಯ ಮಾಲೆಯ ಮುಖಾಂತರ ರಚಿಸಿ ಬಿಡುಗಡೆ ಮಾಡಿ ಸಾಹಿತ್ಯ ಸೇವೆ ಸಲ್ಲಿಸಿದ್ದಾರೆ. ಶಿಶು ಗೀತೆ ರಚನೆ ಇವರ ಮೆಚ್ಚಿನ ಹವ್ಯಾಸ. ಇವರ ಕೃತಿಗಳನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯೂ ಪ್ರಕಟಿಸಿದೆ. ಇವರ ಅನೇಕ ಕವನಗಳು, ಲೇಖನಗಳು ನಾಡಿನ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಅನೇಕ ಸ್ಮರಣ ಸಂಚಿಕೆಗಳಿಗೂ ಸಂಪಾದಕರಾಗಿ ಕೆಲಸ ಮಾಡಿದ್ದಾರೆ. ಪುತ್ತೂರಿನ ಸಾಹಿತ್ಯ ಸಮ್ಮೇಳನ ಹಾಗೂ ಶಿಶು ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನಿಸಲ್ಪಟ್ಟಿದ್ದಾರೆ.


ಬಿಳಿನೆಲೆಯ ಪಾಳುಬಿದ್ದಿದ್ದ ಶ್ರೀ ಗೋಪಾಲಕೃಷ್ಣ ದೇವಸ್ಥಾನ, ತಮ್ಮ ಕುಟುಂಬದ ಶ್ರೀ ಕಡಬ ಶ್ರೀ ಶ್ರೀಕಂಠಸ್ವಾಮಿ ಹಾಗೂ ಶ್ರೀ ಮಹಾಗಣಪತಿ ದೇವಸ್ಥಾನವನ್ನು ಸಮಗ್ರವಾಗಿ ಜೀರ್ಣೋದ್ಧಾರಗೊಳಿಸಿ ಬ್ರಹ್ಮಕಲಶೋತ್ಸವ ನೆರವೇರಿಸಿದ ಪುಣ್ಯ ಇವರದ್ದು. ಅಲ್ಲದೇ ಅನೇಕ ದೇವಾಲಯಗಳ ಸಮಿತಿಯಲ್ಲಿ ಪದಾಧಿಕಾರಿಯಾಗಿಯೂ ದುಡಿಯುತ್ತಿದ್ದಾರೆ. ಧಾರ್ಮಿಕ ಸೇವೆಗಾಗಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಸಿಕ್ಕಿರುತ್ತದೆ.

ಶ್ರೀಯುತರು ನಾಟಕ ಹಾಗೂ ಚಿತ್ರಕಲೆಯಲ್ಲೂ ಎತ್ತಿದ ಕೈ. ಮಕ್ಕಳಿಗಾಗಿ ಪುಣ್ಯಕೋಟಿ, ಭಕ್ತಸುಧಾಮ, ಸೂಹ್ರಾಬ್ ರುಸ್ತುಂ ಎಂಬ ನಾಟಕಗಳನ್ನೂ ಬರೆದು ಆಡಿಸಿದ್ದಾರೆ. ಇವರ ಪತ್ನಿ ಶ್ರೀಮತಿ ಎಂ.ಬಿ.ಶಾಂತಾ ಕುಮಾರಿ. ಪುತ್ರ ಶ್ರೀ ಕೆ. ಶರತ್ ಕುಮಾರ್ ಹಾಗೂ ಶ್ರೀ ಕೆ.ಸನತ್ ಕುಮಾರ್. ಪುತ್ರಿ ಕೆ. ಸೌಮ್ಯ.

ನಾಡಿನ ಗಣ್ಯ ವ್ಯಕ್ತಿಗಳ ಬಗ್ಗೆ ಪ್ರಕಟಗೊಂಡ ಪತ್ರಿಕಾ ವರದಿಗಳನ್ನು ಕತ್ತರಿಸಿ ತೆಗೆದಿಟ್ಟುಕೊಂಡು ಅದರ ಆಲ್ಬಂ ರಚಿಸುವುದು ಇವರ ಇನ್ನೊಂದು ಹವ್ಯಾಸ. ಈ ಕೆಲಸವನ್ನು ಅನೇಕ ಗಣ್ಯರು ಕಂಡು ಮೆಚ್ಚುಗೆ ಸೂಚಿಸಿದ್ದಾರೆ.

ಸದ್ಯ ಕಡಬ ಶ್ರೀ ಶ್ರೀಕಂಠಸ್ವಾಮಿ ದೇವಸ್ಥಾನದ ಆಡಳಿತ ಮೊಕ್ತೇಸರರಾಗಿ ಕೆಲಸ ನಿರ್ವಹಿಸುತ್ತಾ, ಕವನ ಲೇಖನ ಬರೆಯುತ್ತಾ ಸಾಹಿತ್ಯ ಸೇವೆ, ಸಮಾಜ ಸೇವೆಯಲ್ಲಿ ತೊಡಗಿರುವ ನಗೆಮುಖದ ಮೆಲು ಮಾತಿನ ಶ್ರೀ ಕಡಬ ಗೋಪಾಲರಾಯರಿಗೆ ಈ ಸಂದರ್ಭದಲ್ಲಿ ಶ್ರೀ ಶಾರದಾ ಬಳಗವು ಅಭಿನಂದನೆಗಳನ್ನು ಸಲ್ಲಿಸುತ್ತದೆ.

## ಯಕ್ಷಗಾನ ಬೊಂಬೆಯಾಟ ಕಲಾವಿದ ಕೆ.ವಿ.ರಮೇಶ್ ಅವರಿಗೆ ಕೇರಳ ಫೋಕ್‌ಲೋರ್ ಅಕಾಡೆಮಿ ಪ್ರಶಸ್ತಿ



ನಮ್ಮ ಸಮಾಜದ ಪ್ರಸಿದ್ಧ ಯಕ್ಷಗಾನ ಬೊಂಬೆಯಾಟ ಕಲಾವಿದ, ಕಾಸರಗೋಡಿನ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘದ ನಿರ್ದೇಶಕ ಕೆ.ವಿ.ರಮೇಶ್ ಅವರು ಕೇರಳ ಫೋಕ್‌ಲೋರ್ ಅಕಾಡೆಮಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಅವರಿಗೆ ಜನವರಿ 1 ರಂದು ಕಣ್ಣೂರಿನಲ್ಲಿ ನಡೆದ ಸರಕಾರಿ ಸಮಾರಂಭದಲ್ಲಿ ರಾಜ್ಯ ಸಂಸ್ಕೃತಿ ಸಚಿವ ಕೆ.ಸಿ.ಜೋಸೆಫ್ ಪ್ರಶಸ್ತಿ ಪ್ರಧಾನ ಮಾಡಿದರು. ಅಕಾಡೆಮಿ ಅಧ್ಯಕ್ಷ ಪ್ರೊ.ಮಹಮ್ಮದ್ ಅಹಮ್ಮದ್ ಸಭೆಯ ಅಧ್ಯಕ್ಷತೆ ವಹಿಸಿದರು. ಅಕಾಡೆಮಿಯ ಕಾರ್ಯದರ್ಶಿ, ಶ್ರೀ ಪ್ರದೀಪ ಕುಮಾರ್ ಉಪಸ್ಥಿತರಿದ್ದರು.

ಕಳೆದ ಮೂರುವರೆ ದಶಕಗಳಲ್ಲಿ ಮೂರು ಸಾವಿರಕ್ಕೂ ಹೆಚ್ಚು ಪ್ರದರ್ಶನ, ಪ್ರಾತ್ಯಕ್ಷಿಕೆಗಳನ್ನು ನೀಡಿ ದೇಶವಿದೇಶಗಳಲ್ಲಿ ಜಯಭೇರಿ ಭಾರಿಸಿದ ಗಡಿನಾಡಿನ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘದ ಪ್ರಧಾನ ಸೂತ್ರದಾರಿಯಾಗಿರುವ ಕೆ.ವಿ. ರಮೇಶ್, ಅಳಿವಿನ ಅಂಚಿನಲ್ಲಿದ್ದ ಯಕ್ಷಗಾನ ಬೊಂಬೆಯಾಟ ಕಲೆಗೆ ಕಾಯಕಲ್ಪ ನೀಡಿದವರು. ಯಕ್ಷಗಾನಾಚಾರ್ಯ ಕುಂಬಳೆ ಪಾರ್ತಿಸುಬ್ಬನ ವಂಶಸ್ಥರಾದ ತಂದೆ ಕ.ವೆಂಕಟಕೃಷ್ಣಯ್ಯನವರ, ಮಾತೃಶ್ರೀ ಗಿರಿಜಾ ಕೆ.ವಿ.ಯವರ ಪ್ರೋತ್ಸಾಹವೇ ಈ ಕಲೆಯಲ್ಲಿ ಆಸಕ್ತಿ ಮೂಡಲು ಕಾರಣವಾಯಿತೆಂದು ರಮೇಶ್ ಹೇಳುತ್ತಾರೆ. ರಾಷ್ಟ್ರೀಯ, ಅಂತಾರಾಷ್ಟ್ರೀಯ ಉತ್ಸವಗಳಲ್ಲಿ ಪಾಲ್ಗೊಂಡಿರುವ ರಮೇಶ್ ಅವರ ಯಕ್ಷಗಾನ ಬೊಂಬೆಗಳು ವಿಶ್ವದ ವಿವಿಧ ರಾಷ್ಟ್ರಗಳ ಮ್ಯೂಸಿಯಂನಲ್ಲಿ ರಾರಾಜಿಸುತ್ತಿವೆ. ಪ್ರತಿಷ್ಠಿತ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಮಾತ್ರವಲ್ಲದೆ ಅಂತಾರಾಷ್ಟ್ರೀಯ ಮಟ್ಟದ ಪ್ರಶಸ್ತಿಗಳೂ ಅವರಿಗೆ ಲಭಿಸಿದೆ. ವಿದ್ಯಾರ್ಥಿಗಳಿಗೆ ಬೊಂಬೆಯಾಟ ಕಲೆಯಲ್ಲಿ ಆಸಕ್ತಿ ಮೂಡಿಸುವ ಉದ್ದೇಶದಿಂದ ''ಚಿಣ್ಣರ ಅಂಗಳಕ್ಕೆ ಪುತ್ಥಳಿ ಯಾತ್ರೆ'' ಎನ್ನುವ ವಿಶೇಷ ಅಭಿಯಾನವನ್ನು ಪ್ರಾರಂಭಿಸಿ ಯಶಸ್ವಿಯಾಗಿರುವ ರಮೇಶ್, ಪಿಲಿಕುಂಜೆಯಲ್ಲಿ ಯಕ್ಷಪುತ್ಥಳಿ ಬೊಂಬೆಮನೆಯನ್ನು ನಿರ್ಮಿಸಿದ್ದು ಸಾವಿರ ಬೊಂಬೆಗಳ ಮ್ಯೂಸಿಯಂ ಸ್ಥಾಪಿಸುವ ಸದುದ್ದೇಶದೊಂದಿಗೆ ಕಾರ್ಯಪ್ರವೃತ್ತರಾಗಿದ್ದಾರೆ. ಕೇರಳ ಸರಕಾರವು ಪ್ರಶಸ್ತಿ ನೀಡಿ ಗೌರವಿಸುತ್ತಿರುವುದು ಅವರ ಸಾಧನೆಗೆ ಸಂದ ಮಾನ್ಯತೆಯಾಗಿದೆ. ಇವರಿಗೆ ಶ್ರೀ ಶಾರದಾ ಬಳಗದ ಅಭಿನಂದನೆಗಳು.

### ಶ್ರೀಶಾರದಾ ವೇದಿಕೆ - ಪ್ರಕಟಣೆ


ಪತ್ರಿಕೆಯ ವಿಳಾಸ : ಸಂಪಾದಕರು, ಶ್ರೀ ಶಾರದ ಪತ್ರಿಕೆ, ಶಾರದಾ ಮಂಟಪ, ಶಾರದಾ ನಗರ, ಕುಂಜಿಬೆಟ್ಟು, ಉಡುಪಿ-576 102.
ಇ-ಮೇಯ್ಲ್ : srisharadaudupi@gmail.com ಹಾಗೂ sudarshany@rediffmail.com
ವೆಬ್‌ಸೈಟ್ : www.srisharada.org ವಾಟ್ಸ್ ಆ್ಯಪ್ ನಂಬ್ರ : 9845136322
ಶಾರದ ಮಂಟಪದ ಮ್ಯಾನೇಜರ್ 0820-2520754, 9448108920


### ಶ್ರೀಶಾರದಾ ವೇದಿಕೆಗೆ ಸದಸ್ಯತನ ಶುಲ್ಕ

| | | |
|---|---|---|
| ಆಜೀವಸದಸ್ಯರು | : | ರೂ.500/- |
| ದಾನಿಗಳು | : | ರೂ.1000/- |
| ಪೋಷಕರು | : | ರೂ.5000/- |
| ಮಹಾಪೋಷಕರು | : | ರೂ.10000/- |

**ಜಾಹೀರಾತುದರ**

| | | |
|---|---|---|
| ಕಲರ್ ಪುಟದ 1/3ನೇ ಭಾಗ 12 ತಿಂಗಳುಗಳಿಗೆ | : | ರೂ.12000/- |
| ಕಲರ್ ಪುಟದ 1/6ನೇ ಭಾಗ ಶುಭಾಶಯ ಇತ್ಯಾದಿ ಜಾಹೀರಾತು ಒಂದುಬಾರಿಗೆ | : | ರೂ.1000/- |
| ಕಪ್ಪು ಬಿಳುಪು ಪುಟದ 1/6ನೇ ಭಾಗ ಶುಭಾಶಯ ಇತ್ಯಾದಿ ಜಾಹೀರಾತು ಒಂದು ಬಾರಿಗೆ | : | ರೂ.500/- |
| ಕಪ್ಪು ಬಿಳುಪು ಪುಟದ 2 ಇಂಚು 2 ಕಾಲಂ 12 ತಿಂಗಳುಗಳಿಗೆ | : | ರೂ.1500/- |

ಈ ಶುಲ್ಕವನ್ನು ತಮ್ಮ ಹೆಸರು ವಿಳಾಸದೊಂದಿಗೆ, ನಗದು, ಚೆಕ್ ಅಥವಾ ಡಿ.ಡಿ. ಮುಖಾಂತರ ಸಲ್ಲಿಸಬಹುದು ಅಥವಾ ಸಿಂಡಿಕೇಟ್ ಬ್ಯಾಂಕ್, ಕಾರ್‌ಸ್ಟ್ರೀಟ್ ಬ್ರಾಂಚ್, ಬ್ಯಾಂಕಿನ ಖಾತೆಗೆ ನೇರವಾಗಿ ಜಮಾ ಮಾಡಿ ಅದರ ರಶೀದಿಯನ್ನು ಮೇಲಿನ ನಮ್ಮ ಇ-ಮೇಯ್ಲ್/ವಾಟ್ಸ್‌ಆ್ಯಪ್ ವಿಳಾಸಕ್ಕೆ ಕಳುಹಿಸಬಹುದು. ಖಾತೆಯ ಹೆಸರು ಶ್ರೀಶಾರದಾ ವೇದಿಕೆ, ಉಳಿತಾಯ ಖಾತೆಸಂಖ್ಯೆ : 539, SriSharada Credit Co-operative Society, Udupi

**ಸಮಾಜ ಬಾಂಧವರು ಪತ್ರಿಕೆಯನ್ನು ತುಂಬು ಹೃದಯದಿಂದ ಪ್ರೋತ್ಸಾಹಿಸುವಂತೆ ವಿನಂತಿ**

## ಅನ್ವಿತಾ ಎನ್.



ಅನ್ವಿತಾ ಎನ್. ಕಾಪುವಿನಲ್ಲಿ ನಡೆದ ರಾಜ್ಯಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಪ್ರೌಢಶಾಲಾ ವಿಭಾಗದ ''ಕರ್ನಾಟಕ ಶಾಸ್ತ್ರೀಯ ಸಂಗೀತ''ದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾಳೆ. ಸುಳ್ಯದ ರೋಟರಿ ಆಂಗ್ಲ ಮಾಧ್ಯಮ ಶಾಲೆಯ 9ನೇ ತರಗತಿಯ ವಿದ್ಯಾರ್ಥಿನಿಯಾಗಿರುವ ಈಕೆ ವಿದುಷಿ ಮೀನಾಕ್ಷಿ ಎಸ್.ರಾವ್ ಪುತ್ತೂರು ಇವರ ಶಿಷ್ಯೆ ಹಾಗೂ ಅರುಣಕುಮಾರ್ ನೆಲ್ಲಿಕುಂಜೆ-ಚೈತ್ರಾ ದಂಪತಿಯ ಪುತ್ರಿ. (ನೆಲ್ಲಿಕುಂಜೆ ಸುಬ್ಬರಾವ್‌ರ ಮೊಮ್ಮಗಳು)

ಬಹುಮುಖ ಪ್ರತಿಭೆಯಾಗಿರುವ ಈಕೆ ಕರ್ನಾಟಕ ಸರಕಾರ ನಡೆಸುವ ಭರತನಾಟ್ಯ ಜೂನಿಯರ್ ವಿಭಾಗದ ಪರೀಕ್ಷೆಯಲ್ಲಿ 89% (2014ರಲ್ಲಿ) ಅಂಕ, ಕರ್ನಾಟಕ ಶಾಸ್ತ್ರೀಯ ಸಂಗೀತ ಜೂನಿಯರ್ ಪರೀಕ್ಷೆಯಲ್ಲಿ 95% (2013ರಲ್ಲಿ) ಅಂಕ ಪಡೆದು ಉತ್ತಮ ಶ್ರೇಣಿಯಲ್ಲಿ ತೇರ್ಗಡೆಕೊಂಡು ಈ ವರ್ಷ ಅಕ್ಟೋಬರ್ ತಿಂಗಳಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಸೀನಿಯರ್ ಪರೀಕ್ಷೆಯನ್ನು ಬರೆದಿದ್ದಾಳೆ. ಈಗ ವಿದ್ವತ್ ಪರೀಕ್ಷೆಯ ತಯಾರಿಯಲ್ಲಿದ್ದಾಳೆ.




ಎಮ್. ದೇವಾನಂದ್ ಭಟ್
Cell : 9845644556
9483913344
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

*Krishna Rao*
Ph : 2520652
Mob. : 9902029048
KISHAN
Studio & Video
Indoor Photography & Port Folio Photography,
Video & Mixing, Lamination
MAIN ROAD, MAJOOR & BANTAKAL.

## ಶುಭ ವಿವಾಹ

ದಿ. ಕುಂಜಾರು ವಾಸುದೇವ ರಾವ್ ಹಾಗೂ ದಿ. ಶಶಿಕಲಾರ ಮಗ **ರಾಘವೇಂದ್ರ ರಾವ್** ವಿವಾಹವು **ಅನುರಾಧ**ಳೊಂದಿಗೆ ಪಾವಂಜೆ ಜ್ಞಾನಶಕ್ತಿ ಸುಬ್ರಹ್ಮಣ್ಯ ಸನ್ನಿಧಿಯಲ್ಲಿ ತಾ.26-10-2015ರಂದು ಜರುಗಿತು

★★★★ ★★★★

ಬೆಂಗಳೂರಿನ ಶ್ರೀಮತಿ ಲೀಲಾವತಿ ಮತ್ತು ಶ್ರೀ ಅನಂತ ಕೊಠಾರಿರವರ ಮಗಳು **ಅರ್ಚನ ಎ.ಪಿ.**ರವರ ವಿವಾಹವು ಕುಂಭಾಷಿಯ ಶ್ರೀಮತಿ ಶಾರದಾ ಮತ್ತು ಶ್ರೀ ವಿ. ಕೃಷ್ಣಮೂರ್ತಿ ಹೆಬ್ಬಾರ್‌ರ ಪುತ್ರ **ರಾಮಚಂದ್ರ ಹೆಬ್ಬಾರ್**ರೊಂದಿಗೆ ಶ್ರೀ ಶಾರದ ಕಲ್ಯಾಣ ಮಂಟಪದಲ್ಲಿ ತಾ.04-12-2015 ರಂದು ಜರುಗಿತು.

★★★★ ★★★★

ಪಾವಂಜೆಯ ಕೆ. ಭಾಗ್ಯಚಂದ್ರ ಹಾಗೂ ವಾಗೀಶ್ವರಿ ದಂಪತಿಗಳ ಪುತ್ರ **ಭರತ್** ಹಾಗೂ ಸಾಲಿಗ್ರಾಮದ ಶ್ರೀ ಅಣ್ಣಪ್ಪಯ್ಯ ಹಾಗೂ ಶ್ರೀಮತಿ ಲಕ್ಷ್ಮೀ ದಂಪತಿಗಳ ಪುತ್ರಿ **ರಶ್ಮಿ** ಇವರ ವಿವಾಹ ತಾ.14-12-2015ನೇ ಸೋಮವಾರ ಸಾಲಿಗ್ರಾಮದ ಗಿರಿಜಾ ಕಲ್ಯಾಣ ಮಂಟಪದಲ್ಲಿ ಜರಗಿತು.

★★★★ ★★★★

ಮುದ್ದೇಬಿಹಾಳದ ಶ್ರೀಮತಿ ರೇಣುಕಾ ಹಾಗೂ ವೆಂಕಟೇಶ್‌ರವರ ಪುತ್ರಿ **ಶ್ರುತಿ**ರವರ ವಿವಾಹವು ಮಠಂತಬೆಟ್ಟು ಶ್ರೀಮತಿ ಸುಭಾಷಿಣಿ ಮತ್ತು ಸುಭಾಶ್ಚಂದ್ರ ರಾಯರ ಪುತ್ರ **ಶ್ರೇಯಸ್**ರೊಂದಿಗೆ ಶ್ರೀ ಗೋವಿಂದ ಕಲ್ಯಾಣ ಮಂಟಪ, ಉಡುಪಿ ಇಲ್ಲಿ ತಾ.24-12-2015 ರಂದು ಜರುಗಿತು.

★★★★ ★★★★

ಲೋನಂದ ಶ್ರೀಮತಿ ಜಯಶ್ರೀ ಮತ್ತು ಶ್ರೀ ವೈ.ವಿಶ್ವನಾಥ ಶ್ಯಾನುಭಾಗ್ ಇವರ ಪುತ್ರ **ಮಹೇಂದ್ರ**ರವರ ವಿವಾಹವು ಶ್ರೀಮತಿ ಭಾಗ್ಯಲಕ್ಷ್ಮೀ ಹಾಗೂ ಶ್ರೀ ಜಿ.ಕೆ.ಮೋಹನ್‌ರಾವ್‌ರವರ ಪುತ್ರಿ **ದೀಪಾ**ರೊಂದಿಗೆ ಬಾರಕೂರು ಮೂಡುಕೇರಿ ವೆಂಕಟೇಶ್ವರ ಸಭಾಭವನದಲ್ಲಿ ತಾ.24-12-2015 ರಂದು ಜರುಗಿತು.

★★★★ ★★★★

ಪಣಂಬೂರು ಶ್ರೀ ರಾಧಾಕೃಷ್ಣ ರಾವ್ ಮತ್ತು ಶ್ರೀಮತಿ ಉಷಾರವರ ಪುತ್ರ **ನಿಶಾಂತ್** ರವರ ವಿವಾಹವು ಮಡಿಯಾಳ ಎಮ್.ಪ್ರಸನ್ನಕುಮಾರ್ ಮತ್ತು ಶ್ರೀಮತಿ ವಂದನಾರವರ ಪುತ್ರಿ **ಪ್ರತಿಭಾ**ರೊಂದಿಗೆ ತಾ.04-01-2016ರಂದು ಪುತ್ತೂರು ಶ್ರೀ ಮಹಾಲಿಂಗೇಶ್ವರ ಸಭಾಭವನದಲ್ಲಿ ಜರುಗಿತು.

## ಶುಭ ಜನನ

ಶ್ರೀಮತಿ ಗೀತ ಹಾಗೂ ಶ್ರೀ ರಾಧಾಕೃಷ್ಣ ಕೋಲ್ಪೆಯವರ ಪುತ್ರಿ ಅಮೆರಿಕಾದಲ್ಲಿ ವಾಸ್ತವ್ಯವಿರುವ ಶ್ರೀಮತಿ ತೇಜಸ್ವಿನಿ ಮತ್ತು ಶ್ರೀ ಎಸ್.ಸುರೇಂದ್ರ ದಂಪತಿಗಳಿಗೆ ತಾ.31-12-2015ರಂದು ಹೆಣ್ಣು ಮಗುವಿನ ಜನನ.

### ಮಕರ ಮಾಸದ ವಿಶೇಷ ದಿನಗಳು

| | |
|---|---|
| **15-01-2016** | ಮಕರ ಸಂಕ್ರಮಣ<br>ಉಡುಪಿ ಚೂರ್ಣೋತ್ಸವ |
| **18-01-2016** | ಪೇಜಾವರ ಶ್ರೀಗಳ<br>ಪರ್ಯಾಯೋತ್ಸವ |
| **20-01-2016** | ಸರ್ವೈಕಾದಶಿ |
| **27-01-2016** | ಸಂಕಷ್ಟಹರ ಚತುರ್ಥಿ |
| **04-02-2016** | ಸರ್ವೈಕಾದಶಿ |
| **13-02-2016** | ಕುಂಭ ಸಂಕ್ರಮಣ |
| **18-02-2016** | ಸರ್ವೈಕಾದಶಿ |

## ಗೃಹ ಪ್ರವೇಶ

ಕೊಳೂರಿನಲ್ಲಿ ವಾಸವಾಗಿರುವ ಶ್ರೀ ಇನ್ನ ಶ್ರೀನಿವಾಸ ರಾವ್ ಹಾಗೂ ಶ್ರೀಮತಿ ಪುಷ್ಪಾವತಿ ದಂಪತಿಗಳು 15-11-2015ರಂದು ತಮ್ಮ ಈಗಿನ ನಿವಾಸ ಶ್ರೀ ಗಣೇಶ ಕೃಪಾ ಮನೆಯ ಮೇಲೆ ವಿಸ್ತರಣಾ ಕಟ್ಟಡದ ಗೃಹಪ್ರವೇಶದ ಅಂಗವಾಗಿ ಬೆಳಗ್ಗೆ ಗಣಹೋಮ ಮಧ್ಯಾಹ್ನ ಸತ್ಯನಾರಾಯಣ ಪೂಜೆ ರಾತ್ರಿ ದುರ್ಗಾ ನಮಸ್ಕಾರ ಪೂಜೆಗಳನ್ನು ತಮ್ಮ ಮಕ್ಕಳು ಹಾಗೂ ಬಂಧು ಬಾಂಧವರೊಂದಿಗೆ ನೆರವೇರಿಸಿದರು.

## ನಿಧನ

### ಶ್ರೀಮತಿ ಸ್ವರ್ಣಲತಾ ರಾವ್

ಬೆಂಗಳೂರಿನ ಬಾಬೂಸ್‌ಪಾಳ್ಯದ ನಿವಾಸಿ ಶ್ರೀ ಸುರೇಶ್ ರಾವ್ ಎರ್ಮಾಳುರವರ ಪತ್ನಿ ಶ್ರೀಮತಿ ಸ್ವರ್ಣಲತಾರವರು ತಾ.16-11-2015 ರಂದು ಬೆಂಗಳೂರಿನಲ್ಲಿ ದೈವಾದೀನರಾಗಿರುತ್ತಾರೆ.

★★★★ ★★★★

### ಶ್ರೀಮತಿ ಸರೋಜಿನಿ

ಪೆಲ್ಲಮಾರು ಹೌಸ್, ಮೆಕ್ಕ ಇಲ್ಲಿಯ ನಿವಾಸಿ ಶ್ರೀ ಎಸ್ ಭವಾನಿ ಶಂಕರ ರಾಯರ ಪತ್ನಿ ಶ್ರೀಮತಿ ಸರೋಜಿನಿ 10-12-2015ನೇ ಗುರುವಾರ ದೈವಾದೀನರಾಗಿರುತ್ತಾರೆ.

★★★★ ★★★★

### ಶ್ರೀ ಹರಿಶ್ಚಂದ್ರ ರಾವ್

ಹೆಜಮಾಡಿಯಲ್ಲಿ ವಾಸವಾಗಿದ್ದ ದಿ| ನಟ್ಟೋಜಿ ಶಾರ ವೆಂಕಟ್ರಾಯರ ಪುತ್ರ ಶ್ರೀ ಹರಿಶ್ಚಂದ್ರ ರಾಯರು ತಾ.03-01-2016ರಂದು ಅಲ್ಪಕಾಲದ ಅಸ್ವಾಸ್ಥ್ಯದಿಂದ ನಿಧನರಾಗಿರುತ್ತಾರೆ.

★★★★ ★★★★

### ಶ್ರೀ ಕೃಷ್ಣಮೂರ್ತಿ ರಾವ್

ಕುಕ್ಕೆಹಳ್ಳಿ ದುರ್ಗಾಪ್ರಸಾದ ನಿಲಯದ ನಿವಾಸಿ ಶ್ರೀ ಕೃಷ್ಣಮೂರ್ತಿರಾಯರು ತಾ.29-12-2015.ನೇ ಮಂಗಳವಾರದಂದು ಸ್ವಗೃಹದಲ್ಲಿ ನಿಧನ ಹೊಂದಿದರು. ಅವರು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಮರಿ ಮಕ್ಕಳನ್ನು ಅಗಲಿರುತ್ತಾರೆ.

## ಶ್ರೀ ಮ.ನಾ ಹೆಬ್ಬಾರರ ಹರಿಕಥೆ

ದಿನಾಂಕ 31-12-2015ರ ಸಂಜೆ ಘಂಟೆ 7.00ಕ್ಕೆ ಉಡುಪಿ ಮಿಶನ್ ಆಸ್ಪತ್ರೆ ಸಮೀಪವಿರುವ ಸಾರ್ವಜನಿಕ ಕಾಮಗಾರಿ ಇಲಾಖಾ (ಪಿ.ಡಬ್ಲ್ಯೂ.ಡಿ)ವಸತಿ ಗೃಹ ಸಂಕೀರ್ಣದಲ್ಲಿ ಹೊಸ ವರ್ಷವನ್ನು ಸ್ವಾಗತಿಸುವ ಸಂಭ್ರಮದಲ್ಲಿ ಶ್ರೀ ಹರಿದಾಸ ಮ.ನಾ. ಹೆಬ್ಬಾರರಿಂದ ಸತ್ಯ ಹರಿಶ್ಚಂದ್ರ ಕಥಾಭಾಗದ ಹರಿಕಥಾ ಕಾರ್ಯಕ್ರಮ ಜರಗಿತು. ಆರಂಭದಲ್ಲಿ ಶ್ರೀ ಪ್ರಕಾಶ ಭಟ್‌ರವರು ಸ್ವಾಗತಿಸಿದ್ದು, ಕೊನೆಯಲ್ಲಿ ಶ್ರೀಮತಿ ಜಯಶ್ರೀಯವರು ಧನ್ಯವಾದವಿತ್ತರು. ಶ್ರೀ ಹಾಲಾಡಿ ಕೃಷ್ಣ ಕಾಮತ್ ಮತ್ತು ಶ್ರೀ ಕೂಡ್ಲಿ ದೇವದಾಸ್‌ರಾವ್‌ರವರು ಪಕ್ಕವಾದ್ಯದಲ್ಲಿ ಸಹಕರಿಸಿದ್ದರು.

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

| | |
|---|---|
| ಮಂಗಳಾರತಿ : | ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ |
| ಪ್ರತಿ ಸೋಮವಾರ : | **‘‘ಸತ್ಸಂಗದವರಿಂದ ಭಜನೆ’’** ಸಂಜೆ 6-00 ಗಂಟೆಯಿಂದ |
| ಪ್ರತಿ ಮಂಗಳವಾರ : | **‘‘ಸೌಂದರ್ಯಲಹರಿ ಪಾರಾಯಣ’’**<br>ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಶುಕ್ರವಾರ : | **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ**<br>ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಆದಿತ್ಯವಾರ : | ಸ್ವಾಧ್ಯಾಯ ಸಮಿತಿಯವರಿಂದ **‘‘ಪಾರಾಯಣ’’**<br>ಸಂಜೆ ಗಂಟೆ 4-30ರಿಂದ |

**ಸಂಕಷ್ಟಹರ ಚತುರ್ಥಿಯಂದು (ತಾ.27-01-2016) ‘‘ಸಾಮೂಹಿಕ ಗಣಹೋಮ’’ ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.05-02-2016 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.29-01-2016 ಹಾಗೂ ತಾ.12-02-2016 ಪಂಚಮಿಯಂದು ‘‘ನಾಗದೇವರಿಗೆ ತನುಸೇವೆ’’ ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**


ಶ್ರೀ ಮಾತಾ ಜ್ಯೋತಿಷ್ಯಾಲಯ
ಶ್ರೀ ಸುಬ್ರಹ್ಮಣ್ಯ ಕ್ಷೇತ್ರ, ಚೌಳಕೆರೆ, ಬಾರ್ಕೂರು.
ಬಾರ್ಕೂರು ಸಂಸ್ಥಾನದ ಪಾರಂಪರ್ಯ ನಾಗಬ್ರಹ್ಮ ಹಾಗೂ ದುರ್ಗೆಯ ದರ್ಶನ ಪಾತ್ರಿಗಳು, ಜೋತಿಷ್ಯರು ಮತ್ತು ಪುರೋಹಿತರು ಅಷ್ಟ ಮಂಗಲ ಪ್ರಶ್ನೆ, ಆರೂಢರಾಶಿ ಪ್ರಶ್ನೆ, ಜಾತಕ, ನಾಗದರ್ಶನ ಮತ್ತು ಸರ್ಪಸಂಸ್ಕಾರ, ಆಶ್ಲೇಷಬಲಿ, ಪ್ರತಿಷ್ಠೆ, ಶಾಂತಿ ಹಾಗೂ ಶುಭ ಕರ್ಮಗಳಿಗೆ ಅಗತ್ಯವಿದ್ದಲ್ಲಿ ವಿಚಾರಿಸಿ.
ಶ್ರೀ ರಾಘವೇಂದ್ರ ಭಟ್ (ಫೋನ್ : 9632302234.)


Buying and selling shares as easy as checking your emails
Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425), NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)

ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ
ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.
ವೇದಮೂರ್ತಿ ಚಿದಾನಂದ ಭಟ್
#1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-560010
ಶ್ರೀ ಅಗಸ್ತ್ಯೇಶ್ವರ ದೇವಸ್ಥಾವದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ
ಮೊಬೈಲ್- 9886629697, 9986119865

RAJESH POWER PRESS

PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

ಪ್ರೊ : ಸುಧಾಕರ್ ರಾವ್ ಬೆಳ್ಳೆ

ಶ್ರೀಮಾತಾ ಇಲೆಕ್ಟ್ರಾನಿಕ್ಸ್
ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ ಭೇಟಿ ನೀಡಿ....
ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258-274103
ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ, ಗ್ರಾಮಪಂಚಾಯತ್‌ನ ಎದುರು. ಫೋನ್ : 0820-2599093

## ವಿದ್ಯಾರ್ಥಿವೇತನ ನಿಧಿಗೆ ಉದಾರ ಕೊಡುಗೆ

ಬೆಂಗಳೂರಿನ ಬಾಬೂಸ್ ಪಾಳ್ಯದಲ್ಲಿ ವಾಸವಾಗಿರುವ ಸಿಂಡಿಕೇಟ್ ಬ್ಯಾಂಕಿನ ನಿವೃತ್ತ ಸೀನಿಯರ್ ಮೆನೇಜರ್ ಶ್ರೀ ಸುರೇಶ್ ರಾವ್ ಎರ್ಮಾಳು ಇವರು ತಾ.16-11-2015ರಂದು ದಿವಂಗತರಾದ ತಮ್ಮ ಪತ್ನಿ ಶ್ರೀಮತಿ ಸ್ವರ್ಣಲತಾ (ಅಲೆವೂರು ದಿ| ಭುಜಂಗ ರಾವ್ ಮತ್ತು ಶಾಂತಾದೇವಿಯವರ ಪುತ್ರಿ) ಅವರ ನೆನಪಿಗಾಗಿ ಶ್ರೀ ಸ್ಥಾನಿಕದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ ಇದರ ವಿದ್ಯಾರ್ಥಿ ವೇತನ ನಿಧಿಗೆ ರೂ.15,000ಗಳನ್ನು ಕೊಡಮಾಡಿದ್ದಾರೆ. ಇವರು ಎರ್ಮಾಳು ಸೀತಾರಾಮ ರಾವ್ ಹಾಗೂ ಚಿನ್ನಮ್ಮರವರ ದ್ವಿತೀಯ ಪುತ್ರ. ಶ್ರೀಯುತರಿಗೆ ಶ್ರೀಶಾರದೆಯು ಆಯುರಾರೋಗ್ಯ, ಐಶ್ವರ್ಯಗಳನ್ನು ಕರುಣಿಸಿ ದಿವಂಗತರಿಗೆ ಪರಮಸಾಯುಜ್ಯವನ್ನು ಒದಗಿಸಲೆಂದು ಶ್ರೀದೇವಿಯಲ್ಲಿ ಆಡಳಿತ ಮಂಡಳಿಯು ಪ್ರಾರ್ಥಿಸುತ್ತದೆ. ಹಾಗೂ ಶ್ರೀಯುತರಿಗೆ ಉದಾರ ಕೊಡುಗೆಗಾಗಿ ಧನ್ಯವಾದಗಳನ್ನು ಸಮರ್ಪಿಸುತ್ತದೆ.

## ಶ್ರೀ ಸುಬ್ರಹ್ಮಣ್ಯ ಸಭಾದ ಮಹಾಸಭೆ


ಎಂ.ಆರ್.ವಾಸುದೇವ್

ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ 106ನೇ ವರ್ಷದ ಮಹಾಸಭೆ ತಾ.20–12–2015 ನಡೆಯಿತು. ವಿವಿಧ ಪಾರಾಯಣಗಳು ಸತ್ಯನಾರಾಯಣ ಪೂಜೆ ಸಂಕಲ್ಪದ ನಂತರ ಅಡುಗೆ, ಆಶು ಭಾಷಣ, ಜಾನಪದ, ಭಕ್ತಿಗೀತೆ ಸ್ಪರ್ಧೆಗಳು ನಡೆದವು. ನಂತರ ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಸಿ. ಎಸ್.ರಾವ್‌ರವರ ಪ್ರಸ್ತಾವನೆಯೊಂದಿಗೆ "ಮಹಾಸಭೆ" ಆರಂಭವಾಯಿತು. 2014–15ರ ಆಡಳಿತ ಮಂಡಳಿಯ ವರದಿಯನ್ನು ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆಯವರು ಮಂಡಿಸಿದರು. ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ.ಶ್ರೀಕಾಂತ ರಾವ್ ಅದೇ ಸಾಲಿನ ಪರಿಶೋಧಿತ ಲೆಕ್ಕಪತ್ರ ಮತ್ತು ಅಡಿಟ್ ವರದಿಯನ್ನು ಮಂಡಿಸಿದರು. ವರದಿಗಳನ್ನು ಸದಸ್ಯರು ಅನುಮೋದಿಸಿದ ಬಳಿಕ ನೂತನ ಆಡಳಿತ ಮಂಡಳಿ ಸದಸ್ಯರು ಮತ್ತು ವಿಶೇಷ ಆಹ್ವಾನಿತರನ್ನು ಆರಿಸಲಾಯಿತು. ಆಡಳಿತ ಮಂಡಳಿಯ ಸಭೆಯಲ್ಲಿ ಶ್ರೀ ಎಂ. ಆರ್ ವಾಸುದೇವರನ್ನು ಅಧ್ಯಕ್ಷರಾಗಿ , ಶ್ರೀ ಡಾ. ಎ. ಪಿ. ಕೃಷ್ಣ ಮತ್ತು ಶ್ರೀ ಹರ್ಷ ಕುಮಾರ್ ಕೇದಗೆ ಉಪಾಧ್ಯಕ್ಷರುಗಳಾಗಿ, ಶ್ರೀ ಕರುಣ್ ರಾವ್ ಬೆಳ್ಳೆ ಕಾರ್ಯದರ್ಶಿಗಳಾಗಿ, ಶ್ರೀ ಅನಿಲ್ ರಾವ್, ಬಿ. ಎಸ್. ಮತ್ತು ಶ್ರೀ ಚೇತನ್ ಶರ್ಮಾ ಜೊತೆ ಕಾರ್ಯದರ್ಶಿಗಳಾಗಿ, ಶ್ರೀ ಪಿ. ಶ್ರೀಕಾಂತ್ ರಾವ್ ಕೋಶಾಧಿಕಾರಿಗಳಾಗಿ ಆಯ್ಕೆಗೊಂಡರು, ನಂತರ ಮಂಗಳಾರತಿ, ಪ್ರಸಾದ ವಿತರಣೆ ಮತ್ತು ಪ್ರಸಾದ ಭೋಜನದ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಶ್ರೀ ಜಗನ್ನಾಥ ರಾವ್ ಮತ್ತು ಶ್ರೀಮತಿ ಲಲಿತಾ ದಂಪತಿಗಳು ಸತ್ಯನಾರಾಯಣ ಪೂಜೆಯನ್ನು ನೆರವೇರಿಸಿದರು. ಶ್ರೀಮತಿ ಅನುರಾಧ ರಾವ್ ನಿರ್ದೇಶನದ ಮತ್ತು ವೈಯಕ್ತಿಕ ನಿರ್ದೇಶನದಲ್ಲಿ ಹಲವಾರು ನೃತ್ಯಗಳು, ಸಮೂಹ ನೃತ್ಯಗಳು ನಡೆದವು. ಕಾರ್ಯಕ್ರಮಗಳನ್ನು ಯುವ ವೇದಿಕೆಯ ಕಾರ್ಯದರ್ಶಿ ಶ್ರೀ ಸುರೇಶ್ ಕಡಬ, ಮಹಿಳಾ ವೇದಿಕೆಯ ಶ್ರೀಮತಿ ಶೈಲಜಾ ಶ್ರೀಕಾಂತ್, ಶ್ರೀಮತಿ ಅರುಣಾ ಸೋಮಶೇಖರ್ ಮತ್ತು ಶ್ರೀಮತಿ ಕುಸುಮ ನವೀನ್ ಕುಮಾರ್‌ರವರು ಸಂಯೋಜಿಸಿ ನಿರ್ವಹಿಸಿದರು.

ವರದಿ : **ಶ್ರೀ ಪಿ. ಶ್ರೀಕಾಂತ ರಾವ್, ಮಂಗಳೂರು**

### ದಾಂಪತ್ಯ ಜೀವನದ ರಜತ ಮಹೋತ್ಸವದ ಅಭಿನಂದನೆಗಳು


**ಶ್ರೀಮತಿ ನಳಿನಿ ಮತ್ತು ಶ್ರೀ ರವೀಂದ್ರ ದೊಡ್ಮನೆ, ಕೋಟೇಶ್ವರ**

ಶ್ರೀಮತಿ ಲಕ್ಷ್ಮೀ ಮತ್ತು ಶ್ರೀ ವಾಸುದೇವ ಶ್ಯಾನುಭೋಗ್, ಕೋಟೇಶ್ವರ
ಶ್ರೀಮತಿ ಭಾನುಮತಿ ಮತ್ತು ಶ್ರೀ ಜಯರಾಮ ಶ್ಯಾನುಭೋಗ್
ಶ್ರೀಮತಿ ಉಷಾ ಮತ್ತು ಶ್ರೀ ನಾಗೇಶ್ ಹೆಬ್ಬಾರ್, ಹೆಮ್ಮಾಡಿ.
ಶ್ರೀಮತಿ ಶಾಂತಾ ಮತ್ತು ಶ್ರೀ ಗಣೇಶ್ ರಾವ್, ಕುಂಭಾಶಿ.
ವಂದನ, ವಿನೀತ್,ಶೀತಲ್,ವಾಣಿಶ್ರೀ, ಸುಜಲ, ನಿಖಿತಾ,ಶಾಂತಲಾ.

ವನಜಾಕ್ಷಿ ರಾವ್, ಕಾರಿಂಜ.
ಶ್ರೀಮತಿ ಉಷಾ ಮತ್ತು ಶ್ರೀ ರಾಜಶೇಖರರಾವ್
ಶ್ರೀಮತಿ ಭಾಗ್ಯಜ್ಯೋತಿ ಮತ್ತು ಶ್ರೀ ಅರವಿಂದರಾವ್
ಶ್ರೀಮತಿ ದೇವಿಕಾ ಮತ್ತು ಶ್ರೀ ವೆಂಕಟೇಶ್‌ರಾವ್
ದೀಕ್ಷಾ, ನಂದನ್, ತನ್ಮಯಿ, ನೂತನ್, ತನುಷ್


### ನಿಮ್ಮ ಸುಮಧುರ ದಾಂಪತ್ಯವು 50ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಸಂದರ್ಭದಲ್ಲಿ


**ಶ್ರೀಮತಿ ಶೋಭಾ ಮತ್ತು ಶ್ರೀ ರಾಧಾಕೃಷ್ಣ ರಾವ್, ಕುಕ್ಕಿಕಟ್ಟೆ**

ಶುಭ ಕೋರುವ,

ಶ್ರೀ ಗುರುರಾಜ ರಾವ್ ಅಂಬಲ್ಪಾಡಿ, ಕುಕ್ಕಿಕಟ್ಟೆ
ಶ್ರೀಮತಿ ರತ್ನಾವತಿ ಮತ್ತು ಶ್ರೀ ಸುರೇಶ ರಾವ್
ಶ್ರೀಮತಿ ಸುಕನ್ಯ ಮತ್ತು ಶ್ರೀ ಸುಭಾಸ್ ರಾವ್

ಶ್ರೀಮತಿ ಮಾಲತಿ ಮತ್ತು ಶ್ರೀ ಸತೀಶ ರಾವ್
ಶ್ರೀಮತಿ ಸುಲಕ್ಷಣ ಮತ್ತು ಶ್ರೀ ಸಂತೋಷ ರಾವ್
ಮತ್ತು ಮೊಮ್ಮಕ್ಕಳು, ಬಂಧುಮಿತ್ರರು



# ಫೋಟೋ ಆಲ್ಬಂ

ಸುರತ್ಕಲ್ ಸಂಘದ ಮಹಾಸಭೆಯ ಫೋಟೋ




ಶ್ರೀಮತಿ ಜಯಶ್ರೀ ಕೃಷ್ಣಯ್ಯ ಅನಂತಪುರ ರವರ ಫೋಟೋ



'ಮನದಾಳದಿಂದ'... ಪುಸ್ತಕ ಬಿಡುಗಡೆಯ ಫೋಟೋ



ಅವನೀಂದ್ರ ನಾಥ್‌ರವರ ಪುಸ್ತಕ ಬಿಡುಗಡೆಯ ಫೋಟೋ



ಶ್ರೀ ಮಾರ್ಪಳ್ಳಿ ಆರ್. ಮಂಜುನಾಥ್‌ರವರ ಪುಸ್ತಕ ಬಿಡುಗಡೆಯ ಫೋಟೋ




ಉಡುಪಿ ಪರ್ಯಾಯದ ಹೊರೆಕಾಣಿಕೆಯ ಫೋಟೋ



ಮಂಜುನಾಥ ಹೆಬ್ಬಾರರ ಮನೆಗೆ ಶ್ರೀ ಶ್ರೀಗಳ ಭೇಟಿಯ ಫೋಟೋ





## ಚಿಣ್ಣರ ಅಂಗಳ



### ಗುರುದಕ್ಷಿಣೆ

ಒಂದು ದಿನ ದ್ರೋಣರು ಎಲ್ಲ ಶಿಷ್ಯರನ್ನು ಕರೆದು ಹೀಗೆ ಹೇಳಿದರು. ''ರಾಜ ಕುಮಾರರೇ ನಿಮ್ಮ ವಿದ್ಯಾಭ್ಯಾಸ ಮುಗಿದಿದೆ. ನನ್ನ ಗುರುದಕ್ಷಿಣೆಯನ್ನು ಕೊಡುತ್ತೀರಾ?'' ಎಂದರು. ಎಲ್ಲರೂ ''ಗುರುಗಳೇ ನಿಮಗೆ ಯಾವ ವಸ್ತುವನ್ನು ಗುರುದಕ್ಷಿಣೆಯನ್ನಾಗಿ ನೀಡಬೇಕು'' ಎಂದು ಹೇಳಿರಿ ಎಂದರು. ದ್ರೋಣರು ದ್ರುಪದ ರಾಜನನ್ನು ಹಿಡಿದು ತನ್ನಿರಿ ಎಂದು ಆದೇಶ ಮಾಡಿದರು.

ರಾಜಕುಮಾರರು ಯುದ್ಧೋತ್ಸಾಹದಿಂದ ಹೊರಟು ಪರಸ್ಪರ ಸ್ಪರ್ಧೆಯಿಂದ ಮುಂದೆ ಸಾಗಿದರು. ಕೌರವರು ತಾವು ಗುರುದಕ್ಷಿಣೆ ಕೊಡಬೇಕೆಂದು ಬಯಸಿದರೆ ಪಾಂಡವರು ತಾವೇ ಕೊಡಬೇಕೆಂದುಕೊಂಡರು. ದುರ್ಯೋದನನು ಸಹೋದರರೊಂದಿಗೆ ಮೊದಲಿಗೆ ಪಾಂಚಾಲ ದೇಶವನ್ನು ಪ್ರವೇಶ ಮಾಡಿದನು ಆಗ ಪಾಂಡವರು ಅವರ ಕೈಲಾಗದಿದ್ದರೆ ತಾವು ಪ್ರಯತ್ನಿಸೋಣವೆಂದು ಹೊರಗೆ ನಿಂತರು.

ಕೌರವರು ಅಬ್ಬರಿಸುತ್ತಾ ದಾರಿಯಲ್ಲಿ ಸಿಕ್ಕ ಸೈನಿಕರನ್ನು ಕತರಿಸುತ್ತಾ ಮುನ್ನೆಡೆದರು. ದ್ರುಪದ ರಾಜನು ರಥವನ್ನೇರಿ ಬಂದು ಕೌರವನನ್ನು ಎದುರಿಸಿದನು. ಅವನೂ ಸಹ ಪರಾಕ್ರಮ ಹೊಂದಿದವನೇ ಆದ್ದರಿಂದ ಕೌರವರನ್ನು ಕಂಗೆಡಿಸಿದನು ದುರ್ಯೋದನನು ಎಲ್ಲರೊಂದಿಗೂ ಸೋತು ಹಿಂತಿರುಗಿದನು.

ಅರ್ಜುನನು ಅಣ್ಣನಾದ ಯುಧಿಷ್ಠಿರನನ್ನು ವಂದಿಸಿ ಭೀಮ ನಕುಲ ಸಹದೇವನೊಂದಿಗೆ ಯುದ್ಧರಂಗಕ್ಕೆ ಹೋದನು. ತನ್ನಲ್ಲಿರುವ ತೀಕ್ಷ್ಣ ಬಾಣಗಳಿಂದ ಸೈನಿಕರನ್ನು ನಾಶಗೊಳಿಸಿದನು. ಭೀಮನು ಗದೆಯಿಂದ ಅನೇಕರನ್ನು ಹೊಡೆದು ಕೆಡವಿದನು. ಆನೆ ಕುದುರೆ ರಥ ಸೈನಿಕರು ನಾಶ ಹೊಂದಿದರು. ಅರ್ಜುನನು ದ್ರುಪದನ ಊರಿಗೆ ತನ್ನ ರಥವನ್ನು ತೆಗೆದುಕೊಂಡು ಹೋಗಿ ಬಾಣಗಳಿಂದ ಮುಚ್ಚಿ ಬಿಟ್ಟನು ಸೈನಿಕರು ಹೆದರಿ ಓಡಿದಾಗ ದ್ರುಪದನನ್ನು ತಂದು ಗುರು ದ್ರೋಣರ ಎದುರಿಗೆ ತಂದು ಬಿಟ್ಟನು.

ತನ್ನ ಶಿಷ್ಯನು ಮಾಡಿದ ಸಾಹಸವನ್ನು ಕಂಡು ಗುರು ದ್ರೋಣರು ಪ್ರಸನ್ನರಾಗಿ ದ್ರುಪದನಿಗೆ ಈ ರೀತಿ ಹೇಳಿದರು. ಮಹಾರಾಜ ಧ್ರುಪದ ''ನಾನು ನಿನ್ನ ಗೆಳೆಯ ದ್ರೋಣ ನೆನಪಿದೆಯೆ?'' ಎಂದರು. ''ನಿನ್ನ ರಾಜ್ಯವನ್ನು ನಾನು ಗೆದ್ದಿದ್ದೇನೆ ಹಿಂದೆ ಆಹಂಕಾರದಿಂದ ನೀನು ನಿನ್ನ ಮಾತನ್ನು ಉಳಿಸಿಕೊಂಡಿಲ್ಲ. ಆದರೆ ನಾನು ನಿನಗೆ ಭಾಗೀರಥಿ ನದಿಯ ದಕ್ಷಿಣ ಭಾಗವನ್ನು ನಿನಗೆ ಕೊಟ್ಟಿದ್ದೇನೆ. ಉತ್ತರಭಾಗ ನನ್ನದಾಗಿದೆ. ಆದರೆ ಎಂದಿಗೂ ನೀನು ನನ್ನ ಗೆಳೆಯನೇ'' ಎಂದು ತಿಳಿಸಿದರು. ಆಗ ಅವಮಾನಿತನಾದ ದ್ರುಪದನು ತಲೆಯಾಡಿಸಿದನು ದ್ರೋಣರು ಅವನನ್ನು ಗೌರವದಿಂದ ಕಳುಹಿಸಿದರು, ಮತ್ತು



ಅಹಿಚ್ಛತ್ರವೆಂಬ ನಗರವನ್ನು ರಾಜಧಾನಿಯನ್ನಾಗಿಸಿಕೊಂಡು ಉತ್ತರ ಪಾಂಚಾಲವನ್ನು ಆಳಿದರು.

**-ಎಂ.ಗಣೇಶ್ ರಾವ್, ಶಿಕ್ಷಕರು, ಬಾರ್ಕೂರು**


**With Best Compliments From :**

*Deepika Digital Studio & Video*

*Deepika International Travels*



SMT. VIDYA & SRI K. VASUDEVA RAO

WE UNDERTAKE

- Studio Portrait
- Digital Creation
- Outdoor Photography Making
- Digital Albums
- Video Coverage (Cinematography)
- Lamination & Frames
- Led Wall, Crane & Spot Mixing
- Air Ticket (Domestic & International)
- Passport Assistance
- Train Tickets
- Bus Tickets
- Attestation Certificate
- Western Union
- Emigration (ECNR)

Opp. Kediyoor Hotel, Near Service Bus Stand, Udupi - 576 101.

E-mail : deepika.tra@gmail.com

Ph : 0820-2520652 / 4295862 Mobile : 9845177795 / 9845650449


Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Dr.Y. Sudharshan Rao Udupi, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@gmail.com Website : www.srisharada.org